

# ಕೆಲಸದ ಸ್ಥಳದಲ್ಲಿನ ಸ್ತ್ರೀಯರು

ಆಶಿಷ್ ರಾಯ್‌ಚೂರ್

**ಉಚಿತವಾದ ಹಂಚಿಕೆಗಾಗಿ ಮಾತ್ರ**
ಮುದ್ರಣ ಮತ್ತು ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಸ್ತುತ ಪ್ರತಿ: 2023

**ಸಂಪರ್ಕ ಮಾಹಿತಿ**

All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

ದೂರವಾಣಿ: +91-80-25452617
ಇಮೇಲ್: **bookrequest@apcwo.org**
ವೆಬ್ಸೈಟ್: **apcwo.org**

ಬೇರೆ ರೀತಿಯಲ್ಲಿ ಸೂಚಿಸದ ಹೊರತು, ಎಲ್ಲಾ ಧರ್ಮಗ್ರಂಥದ ಉಲ್ಲೇಖಗಳನ್ನು ಕನ್ನಡ ಸತ್ಯವೇದವು ಜೆ.ವಿ (ಬಿಎಸ್ ಐ), ಆವೃತ್ತಿಯಿಂದ ತೆಗೆದುಕೊಳ್ಳಲಾಗಿದೆ. ಬೈಬಲ್ ಸೊಸೈಟಿ ಆಫ್ ಇಂಡಿಯಾದ ಅನುಮತಿಯಿಂದ ಬಳಸಲಾಗಿದೆ.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ಆಲ್ ಪೀಪಲ್ಸ್ ಸಭೆಯೊಟ್ಟಿಗೆ ಪಾಲುದಾರರಾಗಲೂ **apcwo.org/give** ಅಥವಾ ಈ ಪುಸ್ತಕದ ಹಿಂಭಾಗದ ಪುಟಗಳಲ್ಲಿರುವ ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ ಎಂಬ ಪುಟವನ್ನು ಹೇಗೆ ಸಹಾಯ ಮಾಡಬಹುದೆಂಬುದನ್ನು ನೋಡಿರಿ

**ಉಚಿತ ಸಂಪನ್ಮೂಲಗಳು ಮತ್ತು ಸಂಬಂಧಿತ ವೆಬ್ಸೈಟ್‌ಗಳು**

**ಪ್ರಸಂಗಗಳು:** apcwo.org/sermons | **ಪುಸ್ತಕಗಳು:** apcwo.org/books | **ಚರ್ಚ್ ಆಪ್:** apcwo.org/app
**ಸತ್ಯವೇದ ಕಾಲೇಜು:** apcbiblecollege.org | **ಇ-ಕಲಿಕೆ:** apcbiblecollege.org/elearn
**ಸಲಹಾ ಸೇವೆ:** chrysalislife.org | **ಸಂಗೀತ:** apcmusic.org
**ಸೇವಕರುಗಳ ಅನ್ಯೋನ್ಯತೆ:** pamfi.org | **ಏಪಿಸಿ ಪ್ರಪಂಚ ಸೇವೆಗಳು:** apcworldmissions

(Kannada - Women in the Workplace)

# ಕೆಲಸದ ಸ್ಥಳದಲ್ಲಿನ ಸ್ತ್ರೀಯರು

# ಪರಿವಿಡಿ


1. ಮಹಿಳೆಯರು ಕೆಲಸದ ಸ್ಥಳದಲ್ಲಿರುವುದು ಸರಿಯೇ? 1

2. ಕೆಲಸದ ಸ್ಥಳದಲ್ಲಿನ ಸ್ತ್ರೀಯರು ಕುಟುಂಬ, ಕೆಲಸ ಮತ್ತು ಅವರ ಸ್ವಂತ ಆತ್ಮೀಕತೆಯನ್ನು ಹೇಗೆ ಸಮತೋಲನ ಮಾಡಬಹುದು? 11

3. ಕೆಲಸದ ಸ್ಥಳದ ಸವಾಲುಗಳನ್ನು ಸ್ತ್ರೀಯರು ಹೇಗೆ ನಿಭಾಯಿಸುತ್ತಾರೆ? 17

4. ಇಬ್ಬರ–ಆದಾಯದ ಕುಟುಂಬಗಳ ಅಪಾಯಗಳು ಅವುಗಳನ್ನು ಹೇಗೆ ದೂರವಾಗಿರಿಸುವುದು 22

# 1
# ಮಹಿಳೆಯರು ಕೆಲಸದ ಸ್ಥಳದಲ್ಲಿರುವುದು ಸರಿಯೇ?

''ಕೆಲಸದ ಸ್ಥಳದಲ್ಲಿನ ಸ್ತ್ರೀಯರು,'' ಎಂಬ ವಿಷಯದ ಕುರಿತು ನಾನು ಮಾತನಾಡಲೂ ಮೊದಲು ಉದ್ದೇಶವನ್ನಿಟ್ಟುಕೊಂಡಾಗ ನನ್ನ ಪತ್ನಿಯಾದ ಏಮಿಯವರು ''ಈ ವಿಷಯದ ಬಗ್ಗೆ ಮಾತನಾಡಲು ನೀವು ಅರ್ಹರು ಎಂದು ನೀವು ಭಾವಿಸುವುದೇನು?'' ಎಂಬುದಾಗಿ ನನ್ನನ್ನು ಕೇಳಿದರು. ''ನನ್ನ ವಿಧಾನ ಸರಳವಾಗಿದೆ! ಈ ವಿಷಯದ ಕುರಿತು ಸತ್ಯವೇದದಲ್ಲಿ ಆದಿಕಾಂಡದಿಂದ ಪ್ರಕಟಣೆಯವರೆಗೆ ನಾನು ಅಧ್ಯಯನ ಮಾಡುತ್ತೇನೆ ಮತ್ತು ಇದನ್ನು ಕೇಳುವವರಿಗೆ ಪ್ರಸ್ತುತ ಪಡಿಸುತ್ತೇನೆ'' ಎಂಬುದಾಗಿ ಉತ್ತರಿಸಿದೆ. ಆದ್ದರಿಂದ, ನಾನು ಇಲ್ಲಿ ಹಂಚಿಕೊಳ್ಳುತ್ತಿರುವುದು ನಿಶ್ಚಯವಾಗಿ ನನ್ನ ಸ್ವಂತ ಅನುಭವಗಳಲ್ಲ ಆದರೆ ಸಂಪೂರ್ಣವಾಗಿ ದೇವರ ವಾಕ್ಯವೆ ನನ್ನ ಅಧ್ಯಯನವಾಗಿದೆ. ಇಲ್ಲಿನ ವಿಷಯಾಂಶದ ಕುರಿತು ಸತ್ಯವೇದದ ಪ್ರಸ್ತಾಪ ತೆಗೆದುಕೊಂಡು ನಮ್ಮ ಜೀವಿತಗಳಿಗೆ ಇದನ್ನು ಅನ್ವಯಿಸಿಕೊಳ್ಳವುದನ್ನು ನಾವು ಕಲಿಯೋಣ!

ಸ್ತ್ರೀಯರು ಕೆಲಸದ ಸ್ಥಳದಲ್ಲಿ ದುಡಿಯುವುದು ಸರಿಯೇ? ಇವರ ಕುರಿತು ಜನರು ವಿವಿಧ ಅಭಿಪ್ರಾಯಗಳನ್ನು ಹೊಂದಿದ್ದಾರೆ. ಕೆಲವರು ''ಹೌದು'' ಅನ್ನುತ್ತಾರೆ. ಇತರರು ''ಇಲ್ಲ! ಸ್ತ್ರೀಯರು ಮನೆಯಲ್ಲೇ ಇರಬೇಕು ಮತ್ತು ಹೊರಗಡೆ ಹೆಜ್ಜೆಯನ್ನಿಡಬಾರದು.'' ಎಂಬುದಾಗಿ ಹೇಳುತ್ತಾರೆ. ಆದರೆ ಇದರ ಕುರಿತು ಸತ್ಯವೇದಕ್ಕನುಸಾರವಾದ ದೃಷ್ಟಿಕೋನವನ್ನು ನಾವು ಪಡೆಯೋಣ.

## ಸ್ತ್ರೀಯರ ಮೇಲೆ ಸತ್ಯವೇದದ ದೃಷ್ಟಿಕೋನ

**ಆದಿಕಾಂಡ 2:18**

**ಮತ್ತು ಯೆಹೋವ ದೇವರು ಮನುಷ್ಯನು ಒಂಟಿಗನಾಗಿರುವುದು ಒಳ್ಳೇದಲ್ಲ ಅವನಿಗೆ ಸರಿಬೀಳುವ ಸಹಕಾರಿಯನ್ನು ಉಂಟುಮಾಡುವೆನು ಅಂದನು.**

ಸ್ತ್ರೀಯು ಏಕೆ ಸೃಷ್ಟಿಸಲ್ಪಟ್ಟಳು? ಪುರುಷನಿಗೆ ಸಹಕಾರಿಯಾಗಿರಲು ಮತ್ತು ನೆರವು ನೀಡಬೇಕೆಂಬ ಸಾಮಾನ್ಯವಾದ ಎರಡು ಕಾರಣಗಳಿಗಾಗಿ ಸ್ತ್ರೀಯನ್ನು

ದೇವರು ಸೃಷ್ಟಿಸಿದನು. ಆಕೆಯು ಅವನ ''ಸಹಕಾರಿಣಿಯಾಗಿರಬೇಕಿತ್ತು.'' ಇಬ್ರಿಯ ಭಾಷೆಯಲ್ಲಿ ಇದರ ಅರ್ಥವು ''ವಿರುದ್ಧ ಭಾಗ'' ಅಥವಾ ''ಪ್ರತಿಕೂಲ ಭಾಗ'' ಎಂಬುದಾಗಿದೆ. ಆದ್ದರಿಂದ ಸ್ತ್ರೀಯು ಪುರುಷನ ಅಧೀನ ಭಾಗವಾಗಿ ಸೃಷ್ಟಿಸಲ್ಪಟ್ಟಿದ್ದಾಳೆ ಆದರೆ ಅವನ ಪ್ರತಿಕೂಲ ಅಂಗ ಒಂದು ಸಮಾನ ಭಾಗವಾಗಿರಬೇಕು. ಪುರುಷ ಮತ್ತು ಸ್ತ್ರೀಯರು ಸಮಾನವಾಗಿ ಹೀಗೆ ಸೃಷ್ಟಿಸಲ್ಪಟ್ಟಿದ್ದಾರೆ. ಆದುದ್ದರಿಂದ ಪುರುಷ ಮತ್ತು ಸ್ತ್ರೀಯ ನಡುವಿನ ಸಂಬಂಧವು ಪ್ರಕೃತಿಯಲ್ಲಿ ಪರಸ್ಪರವಾಗಿರಬೇಕೆಂಬುದಾಗಿ ಉದ್ದೇಶಿಸಲ್ಪಟ್ಟಿದೆ. ಅವರು ಪರಸ್ಪರ ''ನೆರವು ಮತ್ತು ಸಹಕಾರಿಗಳಾಗಿದ್ದಾರೆ.'' ಆದರೆ ಬೀಳುವಿಕೆ ಅಥವಾ ಪತನದ ಸಮಯದಲ್ಲಿ ಇದೆಲ್ಲವೂ ಬದಲಾಯಿತು.

**ಆದಿಕಾಂಡ 3:16**
**ಆಮೇಲೆ ಸ್ತ್ರೀಗೆ ನೀನು ಗರ್ಭಿಣಿಯಾಗಿರುವ ಕಾಲದಲ್ಲಿ ಬಹು ಸಂಕಟಪಡಬೇಕೆಂದು ನಾನು ನೇಮಿಸಿದ್ದೇನೆ. ಕಷ್ಟದಿಂದಲೇ ಮಕ್ಕಳನ್ನು ಹೆರುವಿ. ಗಂಡನ ಮೇಲೆ ನಿನಗೆ ಆಶೆಯಿರುವುದು. ಅವನು ನಿನಗೆ ಒಡೆಯನಾಗುವನು.**

ದೇವರು ಪುರುಷ ಮತ್ತು ಸ್ತ್ರೀಯರನ್ನು ಅವರು ಪರಸ್ಪರ ಪೂರಕವಾಗಿರಲು ಪ್ರಾರಂಭದಲ್ಲಿ ಸೃಷ್ಠಿಸಿದ್ದನು ಆದರೆ ಅವರು ಪಾಪಮಾಡಿ ಬಿದ್ದಾಗ ಸ್ತ್ರೀಯು ಪುರುಷನಿಗೆ ಅಧೀನಳಾದಳು. ಆಕೆಯ ಬಯಕೆ ಮತ್ತು ಹಾತೊರೆಯುವುದು ಆಕೆಯ ಗಂಡನ ಕಡೆಗೆ ಆಗಿತ್ತು ಮತ್ತು ಅವನು ಆಕೆಯ ಮೇಲೆ ಆಳ್ವಿಕೆ ಮಾಡುವವನಾದನು. ಹೀಗೆ ಬೀಳುವಿಕೆಯ ಒಂದು ಫಲಿತಾಂಶವು ಇದಾಯಿತು, ಇಂದು ಪುರುಷ್ಯನು ದೊರೆತನ ಮಾಡುವ ಬಿದ್ದುಹೋದಂತಹ ಒಂದು ಪ್ರಪಂಚವನ್ನು ನಾವು ಹೊಂದಿದ್ದೇವೆ. ಇದು ಬಿದ್ದು ಹೋದ ರಾಜ್ಯ ಮತ್ತು ದೇವರ ಉದ್ದೇಶಿತ ರಾಜ್ಯವಲ್ಲ. ಆದರೆ ವಿಮೋಚನೆಯಲ್ಲಿ ಕ್ರಿಸ್ತನು ಸ್ತ್ರೀಯನ್ನು ಪುರುಷನೊಡನೆ ಸರಿಸಮಾನವಾಗಿರಲು ಪುನಃ ಸ್ಥಾಪಿಸಿರುವಂತದ್ದು ಶುಭ ಸಂದೇಶವಾಗಿದೆ. ಕ್ರಿಸ್ತನಲ್ಲಿ ಗಂಡು ಅಥವಾ ಹೆಣ್ಣು ಇಲ್ಲ. ''*ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವುದರಿಂದ ಯೆಹೂದ್ಯನು ಗ್ರೀಕನು ಎಂದೂ ಆಳು ಒಡೆಯ ಎಂದೂ ಗಂಡು ಹೆಣ್ಣು ಎಂದು ಭೇದವಿಲ್ಲ*'' (ಗಲಾತ್ಯದವರಿಗೆ 3:28).

ಈಗ ಪುರುಷ ಮತ್ತು ಸ್ತ್ರೀಯು ಕೃಪೆಯ ಜೀವಿತದಲ್ಲಿ ಜೊತೆ ಬಾಧ್ಯಸ್ಥರು (ಗ್ರೀಕ್‌ನಲ್ಲಿ = ''ಜೊತೆಯಾಗಿ ಭಾಗವಹಿಸುವವರು'')

**1 ಪೇತ್ರನು 3:7**
**ಅದೇ ರೀತಿಯಾಗಿ ಪುರುಷರೇ, ಸ್ತ್ರೀಯು ಪುರುಷನಿಗಿಂತ ಬಲಹೀನಳೆಂಬುದನ್ನು ಜ್ಞಾಪಕ ಮಾಡಿಕೊಂಡು ನಿಮ್ಮ ಹೆಂಡತಿಯರ ಸಂಗಡ ವಿವೇಕದಿಂದ ಒಗೆತನ ಮಾಡಿರಿ. ಅವರು ಜೀವವರಕ್ಕೆ ನಿಮ್ಮೊಂದಿಗೆ ಬಾಧ್ಯರಾಗಿದ್ದಾರೆಂದು ತಿಳಿದು ಅವರಿಗೆ ಮಾನವನ್ನು ಸಲ್ಲಿಸಿರಿ. ಹೀಗೆ ನಡೆದರೆ ನಿಮ್ಮ ಪ್ರಾರ್ಥನೆಗಳಿಗೆ ಅಡ್ಡಿಯಿರುವುದಿಲ್ಲ.**

ದೇವರ ವಿಷಯದಲ್ಲಿ ಸ್ತ್ರೀಯು ಪುರುಷನಿಗೆ ಸರಿಸಮಾನಳೆಂದು ಮನುಷ್ಯನು ಈಗ ಅರ್ಥಮಾಡಿಕೊಳ್ಳಬೇಕು. ಹೇಗಾದರೂ ಬಿದ್ದು ಹೋಗಿ ವಿಮೋಚನೆ ಹೊಂದದ ಲೋಕದಲ್ಲಿ ನಾವು ಇನ್ನೂ ಸಹ ಪುರುಷರು ಪ್ರಾಬಲ್ಯಗಳನ್ನು ಪ್ರಧಾನವಾಗಿ ಹೊಂದಿರುವುದನ್ನು ನೋಡುತ್ತೇವೆ. ಪ್ರಪಂಚವು ಸಂಪೂರ್ಣವಾಗಿ ವಿಮುಕ್ತಗೊಂಡಿಲ್ಲ ಮತ್ತು ಆದ್ದರಿಂದ ಈ ರಚನೆ ಮುಂದುವರಿಯುತ್ತದೆ.

## ಸತ್ಯವೇದದ ಸ್ತ್ರೀಯರು

ದೇವರ ವಾಕ್ಯದ ನಮ್ಮ ಅಧ್ಯಯನದಲ್ಲಿ, ಸ್ತ್ರೀಯರನ್ನು ಅವರ ಮನೆಗಳಿಂದ ಹೊರಗಡೆಯಲ್ಲಿ ದೇವರು ವಿಭಿನ್ನವಾದ ಸಾಮರ್ಥ್ಯಗಳೊಡನೆ ಉಪಯೋಗಿಸಿದ್ದನ್ನು ಇತಿಹಾಸದುದ್ದಕ್ಕೂ ನೋಡುತೇವೆ.

ಕೆಲವು ಉದಾಹರಣೆಗಳ ತ್ವರಿತ ಪಟ್ಟಿ:

### *ಪ್ರವಾದಿನಿ ಮಿರ್ಯಾಮಳು*

**ವಿಮೋಚನಕಾಂಡ 15:20**
**ಆರೋನನ ಅಕ್ಕನಾದ ಮಿರ್ಯಾಮಳು ಪ್ರವಾದಿನಿಯಾಗಿದ್ದು ದಮ್ಮಡಿಯನ್ನು ಕೈಯಲ್ಲಿ ತೆಗೆದುಕೊಂಡಳು. ಸ್ತ್ರೀಯರೆಲ್ಲರೂ ದಮ್ಮಡಿಗಳನ್ನು ಹಿಡಿದು ನಾಟ್ಯವಾಡುತ್ತಾ ಆಕೆಯ ಹಿಂದೆ ಹೋಗುತ್ತಿರಲು.**

### *ದೇವ ದರ್ಶನ ಗುಡಾರದ ಕಟ್ಟುವಿಕೆಯಲ್ಲಿ ಸಹಾಯ ಮಾಡಿದಂತಹ ಸ್ತ್ರೀಯರು*

**ವಿಮೋಚನಕಾಂಡ 35:22,25,26**
**22 ಸಿದ್ಧ ಚಿತ್ತರಾದ ಗಂಡಸರೂ ಹೆಂಗಸರೂ ಬಂದು ಯೆಹೋವನಿಗೆ ಚಿನ್ನದ ಕಾಣಿಕೆಗಳನ್ನು ಅಂದರೆ ಕಡಗ, ಮೂಗುತಿ, ಮುದ್ರೆಯುಂಗುರ, ಕಂಠಮಾಲೆ ಮೊದಲಾದ ಚಿನ್ನದ ಒಡವೆಗಳನ್ನು ಸಮರ್ಪಿಸಿದರು.**

**[25] ಜಾಣೆಯರಾದ ಸ್ತ್ರೀಯರು ತಮ್ಮ ಕೈಗಳಿಂದ ನೀಲಿ ಧೂಮ್ರ ರಕ್ತವರ್ಣಗಳುಳ್ಳ ನೂಲನ್ನೂ ನಾರಿನ ನೂಲನ್ನೂ ನೂತು ಆ ನೂಲನ್ನು ತಂದುಕೊಟ್ಟರು.**
**[26] ಬೇರೆ ಜಾಣೆಯರಾದ ಸ್ತ್ರೀಯರು ಆಡಿನ ಕೂದಲುಗಳನ್ನು ನೂತು ತಂದುಕೊಟ್ಟರು.**

## *ದೇವರ ವಾಕ್ಯವನ್ನು ಸ್ತ್ರೀಯರು ಕಲಿಯಬೇಕೆಂದು ದೇವರು ಬಯಸುತ್ತಾನೆ*

**ಧರ್ಮೋಪದೇಶಕಾಂಡ 31:12**
**ಜನರೆಲ್ಲರೂ ಈ ಧರ್ಮಶಾಸ್ತ್ರವನ್ನು ಕೇಳಿ ತಿಳಿದುಕೊಳ್ಳುವಂತೆ ಸ್ತ್ರೀ ಪುರುಷರನ್ನೂ ಮಕ್ಕಳನ್ನೂ ನಿಮ್ಮ ಊರುಗಳಲ್ಲಿರುವ ಅನ್ಯರನ್ನೂ ಕೂಡಿಸಬೇಕು ಆಗ ಅವರು ತಮ್ಮ ದೇವರಾದ ಯೆಹೋವನಲ್ಲಿ ಭಯಭಕ್ತಿಯುಳ್ಳವರಾಗಿ ಈ ಧರ್ಮಶಾಸ್ತ್ರದ ನಿಯಮಗಳನ್ನು ಅನುಸರಿಸಿ ನಡೆಯುವರು.**

## *ದೆಬೋರಾ*

ದೆಬೋರಾ, ಒಬ್ಬ ಪ್ರವಾದಿನಿಯಾಗಿದ್ದು ಇಸ್ರಾಯೇಲ್ಯರಿಗೆ ಒಬ್ಬ ನ್ಯಾಯಾಧೀಶಳಾಗಿದ್ದಳು (ನ್ಯಾಯಸ್ಥಾಪಕರು 4:4).

## *ಯಾಯೇಲಳು*

ಯಾಯೇಲಳು ಗೃಹಿಣಿಯಾಗಿದ್ದು, ಒಬ್ಬ ಮನುಷ್ಯನ ತಲೆಯ ಮೇಲೆ ಒಂದು ಗೂಟವನ್ನು ಹೊಡೆಯುವ ಮೂಲಕ ಒಂದು ಪ್ರಬಲವಾದ ಜಯವನ್ನು ಇಸ್ರಾಯೇಲ್ಯರಿಗೆ ತಂದುಕೊಟ್ಟಿದ್ದಳು (ನ್ಯಾಯಸ್ಥಾಪಕರು 4:21).

## *ಯೆರೂಸಲೇಮಿನ ಗೋಡೆಗಳನ್ನು ಪುನಃ ಕಟ್ಟಲೂ ಸಹಾಯ ಮಾಡಲೂ ದೇವರು ಸ್ತ್ರೀಯರನ್ನು ಉಪಯೋಗಿಸಿದನು*

**ನೆಹೆಮೀಯ 3:12**
**ಇವನ ಸಮೀಪದಲ್ಲಿ ಗೋಡೆಯನ್ನು ಜೀರ್ಣೋದ್ಧಾರ ಮಾಡಿದವರು ಯೆರೂಸಲೇಮಿನ ಅರೆನಾಡೊಡೆಯನೂ ಹಲ್ಲೋಹೇಷನ ಮಗನೂ ಆದ ಶಲ್ಲೂಮನೂ ಅವನ ಕುಮಾರಿಯರೂ**

## *ಎಸ್ತೇರಳು*

ದೇವರ ಜನರಿಗೆ ಬಿಡುಗಡೆಯನ್ನು ತಂದಂತಹ ಒಬ್ಬ ರಾಣಿಯು ಎಸ್ತೇರಳು ಆಗಿದ್ದಾಳೆ.

## *ಯೇಸುವಿಗೆ ಸೇವೆಸಲ್ಲಿಸಿದ ಸ್ತ್ರೀ*

ಹೊಸ ಒಡಂಬಡಿಕೆಯಲ್ಲಿ, ಯೇಸುವಿಗೆ ಸೇವೆಸಲ್ಲಿಸಿದ ಸ್ತ್ರೀಯರ ಕುರಿತು ನಾವು ಓದುತ್ತೇವೆ.

**ಮಾರ್ಕ 15:41**
**ಆತನು ಗಲಿಲಾಯದಲ್ಲಿದ್ದಾಗ ಆತನನ್ನು ಹಿಂಬಾಲಿಸಿ ಸೇವೆ ಮಾಡುತ್ತಿದ್ದವರಾದ ಮಗ್ದಲದ ಮರಿಯ, ಚಿಕ್ಕಯಾಕೋಬನ ಮತ್ತು ಯೋಸೇಯ ತಾಯಿಯಾದ ಮರಿಯ, ಸಲೋಮೆ ಎಂಬುವರೂ ಆತನ ಸಂಗಡ ಯೆರೂಸಲೇಮಿಗೆ ಬಂದಿದ್ದ ಇನ್ನೂ ಅನೇಕ ಸ್ತ್ರೀಯರೂ ಇದ್ದರು.**

**ಲೂಕ 8:1-3**
**1 ತರುವಾಯ ಆತನು ದೇವರ ರಾಜ್ಯದ ಸುವಾರ್ತೆಯನ್ನು ಸಾರುತ್ತಾ ಊರುಗಳಲ್ಲಿಯೂ ಗ್ರಾಮಗಳಲ್ಲಿಯೂ ಸಂಚರಿಸಿದನು. ಆತನ ಸಂಗಡ ಹನ್ನೆರಡು ಮಂದಿ ಶಿಷ್ಯರೂ ಇದ್ದರು.**
**2 ದೆವ್ವಗಳ ಕಾಟದಿಂದಲೂ ರೋಗಗಳಿಂದಲೂ ಗುಣಹೊಂದಿದ ಕೆಲವು ಹೆಂಗಸರು ಸಹ ಇದ್ದರು. ಈ ಹೆಂಗಸರು ಯಾರಾರೆಂದರೆ-ಏಳು ದೆವ್ವಗಳು ಬಿಟ್ಟು ಹೋಗಿದ್ದ ಮಗ್ದಲದವಳೆಂಬ ಮರಿಯಳು**
**3 ಹೆರೋದನ ಮನೆವಾರ್ತೆಯವನಾದ ಕೂಜನ ಹೆಂಡತಿ ಯೋಹಾನಳು, ಸುಸನ್ನಳು ಇನ್ನು ಬೇರೆ ಅನೇಕರು ಇವರು ತಮ್ಮ ಆಸ್ತಿಯಿಂದ ಆತನಿಗೆ ಕೊಟ್ಟು ಉಪಚಾರಮಾಡುತ್ತಿದ್ದರು.**

## *ಲುದ್ಯಳು*

**ಅಪೊಸ್ತಲರ ಕೃತ್ಯಗಳು 16:14**
**ನಮ್ಮ ಮಾತುಗಳನ್ನು ಕೇಳಿದವರಲ್ಲಿ ಲುದ್ಯಳೆಂಬ ಒಬ್ಬ ಸ್ತ್ರೀಯು ಇದ್ದಳು. ಆಕೆ ಧೂಮ್ರವರ್ಣದ ವಸ್ತ್ರಗಳನ್ನು ಮಾರುವವಳೂ ಥುವತ್ತೈರ ಎಂಬ ಊರಿನವಳೂ ದೇವ ಭಕ್ತಳೂ ಆಗಿದ್ದಳು. ಪೌಲನು ಹೇಳಿದ ಮಾತುಗಳಿಗೆ ಲಕ್ಷ್ಯಕೊಡುವುದಕ್ಕೆ ಕರ್ತನು ಆಕೆಯ ಹೃದಯವನ್ನು ತೆರೆದನು.**

ಲುದ್ಯಳು, ಫಿಲಿಪ್ಪಿಯಲ್ಲಿ ಧೂಮ್ರವರ್ಣದ ವಸ್ತ್ರಗಳನ್ನು ಮಾರುವಂತಹ ಒಬ್ಬ ವ್ಯಾಪಾರಸ್ಥ ಸ್ತ್ರೀಯಾಗಿದ್ದಳು. ಫಿಲಿಪ್ಪಿಯಲ್ಲಿ ಸಭೆಯಾಗಿ ಕೂಡಿಬರುವುದಕ್ಕಾಗಿ ಆಕೆಯ ಮನೆಯನ್ನು ತೆರೆಯಲು ದೇವರು ಆಕೆಯನ್ನು ಉಪಯೋಗಿಸಿದನು. *''ಆಗ ಅವರು ಸೆರೆಮನೆಯೊಳಗಿಂದ ಹೊರಟು ಲುದ್ಯಳ ಮನೆಗೆ ಬಂದು ಸಹೋದರರನ್ನು ನೋಡಿ ಅವರನ್ನು ಧೈರ್ಯಗೊಳಿಸಿ ಹೊರಟು ಹೋದರು''* (ಅಪೊಸ್ತಲರ ಕೃತ್ಯಗಳು 16:40).

## *ಅಕ್ವಿಲನೂ ಮತ್ತು ಪ್ರಿಸ್ಕಿಲ್ಲಳೂ*

**ಅಪೊಸ್ತಲರ ಕೃತ್ಯಗಳು 18:1-4**

**[1] ಇದಾದ ಮೇಲೆ ಪೌಲನು ಅಥೇನೆಯನ್ನು ಬಿಟ್ಟು ಕೊರಿಂಥಕ್ಕೆ ಹೋದನು.**
**[2] ಪೊಂತದಲ್ಲಿ ಹುಟ್ಟಿದ ಅಕ್ವಿಲನೆಂಬ ಒಬ್ಬ ಯೆಹೂದ್ಯನನ್ನು ಅಲ್ಲಿ ಕಂಡನು. ಯೆಹೂದ್ಯರೆಲ್ಲರೂ ರೋಮಾಪುರವನ್ನು ಬಿಟ್ಟು ಹೋಗಬೇಕೆಂದು ಕ್ಲೌದಿಯ ಚಕ್ರವರ್ತಿಯು ವಿಧಿಸಿದ ಕಾರಣ ಅಕ್ವಿಲನೂ ಅವನು ಹೆಂಡತಿಯಾದ ಪ್ರಿಸ್ಕಿಲ್ಲಳೂ ಕೆಲವು ದಿವಸಗಳ ಮುಂಚೆ ಇತಾಲ್ಯ ದೇಶದಿಂದ ಅಲ್ಲಿಗೆ ಬಂದಿದ್ದರು.**
**[3] ಪೌಲನು ಅವರ ಮನೆಗೆ ಹೋಗಿ ತಾನೂ ಅವರೂ ಒಂದೇ ಕಸುಬಿನವರಾಗಿದ್ದರಿಂದ ಅವರಲ್ಲಿದ್ದು ಅವರೊಂದಿಗೆ ಕೆಲಸಮಾಡುತ್ತಿದ್ದನು. ಗುಡಾರ ಮಾಡುವುದು ಅವರ ಕಸುಬಾಗಿತ್ತು**
**[4] ಅವನು ಪ್ರತಿ ಸಬ್ಬತ್ ದಿನವೂ ಸಭಾಮಂದಿರದಲ್ಲಿ ಚರ್ಚಿಸಿ ಯೆಹೂದ್ಯರನ್ನೂ ಗ್ರೀಕರನ್ನೂ ಒಡಂಬಡಿಸುತ್ತಿದ್ದನು.**

ಅಕ್ವಿಲನು ಮತ್ತು ಪ್ರಿಸ್ಕಿಲ್ಲಳೂ ಗುಡಾರ ನಿರ್ಮಿಸುವವರು ವ್ಯಾಪಾರಸ್ಥ ದಂಪತಿಗಳು. ಪೌಲನ ಸೇವೆಯ ಪಾಲುಗಾರರಾಗಿದ್ದರು. ಇನ್ನೂ ಇತರೆ ಮೂರು ಸ್ಥಳಗಳಲ್ಲಿ ಪೌಲನು ಅವರನ್ನು ಜೊತೆ ಕೆಲಸದವರು ಎಂಬುದಾಗಿ ಉಲ್ಲೇಖಿಸುತ್ತಾನೆ (ರೋಮಾಪುರದವರಿಗೆ 16:3; 1 ಕೊರಿಂಥದವರಿಗೆ 16:19; 2 ತಿಮೊಥೆಯನಿಗೆ 4:19).

## *ಪೊಯಿಬೆ, ಯೂನ್ಯ ಮತ್ತು ಇತರೆ ಸ್ತ್ರೀಯರು*

**ರೋಮಾಪುರದವರಿಗೆ 16:1-7**

**[1] ನಾನು ನಿಮ್ಮ ಬಳಿಗೆ ಕಳುಹಿಸುವ ನಮ್ಮ ಸಹೋದರಿಯಾದ ಪೊಯಿಬೆಯನ್ನು ಪ್ರೀತಿಯಿಂದ ಅಂಗೀಕರಿಸಿರಿ. ಆಕೆಯು ಕೆಂಕ್ರೆಯ ಪಟ್ಟಣದಲ್ಲಿರುವ ಸಭೆಯ ಸೇವಕಳಾಗಿದ್ದಾಳೆ.**
**[2] ನೀವು ಆಕೆಯನ್ನು ಕರ್ತನ ಶಿಷ್ಯಳೆಂದು ದೇವ ಜನರಿಗೆ ತಕ್ಕ ಹಾಗೆ ಸೇರಿಸಿಕೊಂಡು ಸಹಾಯವು ಯಾವ ವಿಷಯದಲ್ಲಿ ಬೇಕಾಗಿದ್ದರೂ ಸಹಾಯವನ್ನು ಮಾಡಿರಿ. ಆಕೆಯು ನನಗೂ ಅನೇಕರಿಗೂ ಸಹಾಯ ಮಾಡಿದವಳು.**
**[3] ಕ್ರಿಸ್ತಯೇಸುವಿನ ಸೇವೆಯಲ್ಲಿ ಜೊತೆ ಕೆಲಸದವರಾದ ಪ್ರಿಸ್ಕಿಲ್ಲಳಿಗೂ ಅಕ್ವಿಲನಿಗೂ ನನ್ನ ವಂದನೆಗಳನ್ನು ಹೇಳಿರಿ**
**[4] ಅವರು ನನ್ನ ಪ್ರಾಣದ ಸಂರಕ್ಷಣೆಗಾಗಿ ತಮ್ಮ ಪ್ರಾಣಗಳನ್ನು ಅಪಾಯಕ್ಕೆ ಗುರಿಮಾಡಿದರು. ನಾನು ಮಾತ್ರವೇ ಅಲ್ಲ ಅನ್ಯಜನರ ಸಭೆಗಳವರೆಲ್ಲರೂ ಅವರ ಉಪಕಾರವನ್ನು ಸ್ಮರಿಸುತ್ತಾರೆ.**
**[5] ಅವರ ಮನೆಯಲ್ಲಿ ಕೂಡುವ ಸಭೆಗೆ ಸಹ ನನ್ನ ವಂದನೆಯನ್ನು ಹೇಳಿರಿ. ಆಸ್ಯ ಸೀಮೆಯಲ್ಲಿ ಕ್ರಿಸ್ತನಿಗೆ ಪ್ರಥಮ ಫಲವಾಗಿರುವ ನನ್ನ ಪ್ರಿಯನಾದ ಎಪೈನೆತನಿಗೆ ವಂದನೆ.**
**[6] ನಿಮಗೋಸ್ಕರ ಬಹುಶ್ರಮೆಪಟ್ಟ ಮರಿಯಳಿಗೆ ವಂದನೆ.**

**[7] ನನ್ನ ಸ್ವಜನರೂ ಜೊತೆ ಸೆರೆಯವರೂ ಆಗಿರುವ ಅಂದ್ರೋನಿಕನಿಗೂ ಯೂನ್ಯನಿಗೂ ವಂದನೆ. ಅವರು ಅಪೊಸ್ತಲರಲ್ಲಿ ಪ್ರಸಿದ್ಧರಾಗಿದ್ದಾರೆ. ಮತ್ತು ನನಗಿಂತ ಮುಂಚೆ ಕ್ರಿಸ್ತನನ್ನು ನಂಬುವವರಾದರು.**

ಪೊಯಿಬೆ, ಒಬ್ಬ ಮಹಿಳಾ ಧರ್ಮಾಧಿಕಾರಿಣಿ ಈಕೆಯು ಸಭೆಯ ಕೆಲವು ವ್ಯಾಪಾರಗಳ ಉಸ್ತುವಾರಿ ವಹಿಸಿಕೊಂಡಿದ್ದಳು. ಯೂನ್ಯಳು ಪೌಲನೊಡನೆ ಜೊತೆಕೆಲಸದವಳು ಒಬ್ಬ ಸ್ತ್ರೀ ಅಪೊಸ್ತಲಳಾಗಿದ್ದಳು. ಪೌಲನೊಟ್ಟಿಗೆ ಇನ್ನೂ ಇತರೆ ಸ್ತ್ರೀಯರು ಸಹ ಪಾಲುಗಾರರಾಗಿದ್ದರು ಅವರುಗಳನ್ನು ನನ್ನ *''ಕೂಡ ಸುವಾರ್ತೆಗೋಸ್ಕರ ಪ್ರಯಾಸ ಪಟ್ಟವರು''* (ಫಿಲಿಪ್ಪಿಯವರಿಗೆ 4:3) ಎಂಬುದಾಗಿ ಪೌಲನು ಉಲ್ಲೇಖಿಸಿದ್ದಾನೆ.

ಒಂದು ಸಂಪ್ರದಾಯಿಕವಾದ ಮನೆ ವ್ಯವಸ್ಥೆಯ ಸನ್ನಿವೇಶದ ಹೊರಗಡೆ ಉಪಯೋಗಿಸುವುದರಿಂದ ಆತನ ಕಾರ್ಯದಲ್ಲಿ ದೇವರು ಸ್ತ್ರೀಯರನ್ನು ತೊಡಗಿಸಿದ್ದದ್ದು ಒಂದು ಅವಲೋಕನವಾಗಿದೆ.

## ಸ್ತ್ರೀಯರ ಪ್ರಾಥಮಿಕ ಕರೆ

ಸ್ತ್ರೀಯರ ಪ್ರಾಥಮಿಕವಾದ ಕರೆಯು, ಆಕೆಯ ಗಂಡನಿಗೆ ಹೆಂಡತಿಯಾಗಿರುವುದು, ಆಕೆಯ ಮಕ್ಕಳಿಗೆ ತಾಯಿಯಾಗಿರುವುದು ಮತ್ತು ಮನೆಯನ್ನು ಸಾಗಿಸುವವಳು ಆಗಿರಬೇಕೆಂಬುದಾಗಿ ಸತ್ಯವೇದವು ತುಂಬಾ ನಿಖರವಾಗಿ ಹೇಳುತ್ತದೆ.

**1 ತಿಮೊಥೆಯನಿಗೆ 5:14**
**ಆದದರಿಂದ ಪ್ರಾಯದ ವಿಧವೆಯರು ಮದುವೆ ಮಾಡಿಕೊಂಡು ಮಕ್ಕಳನ್ನು ಹೆತ್ತು ಮನೆಯ ಯಜಮಾನಿಯರಾಗಿರುವುದು ನನಗೆ ಒಳ್ಳೇದಾಗಿ ತೋಚುತ್ತದೆ.**

''ಮನೆಯನ್ನು ಮಾರ್ಗದರ್ಶನ ಮಾಡುವುದು'' (ಗ್ರೀಕ್‌ನಲ್ಲಿ ಒೖಕೋದೆಸ್ಪೊಟಿಯೋ) = ಒಂದು ಕುಟುಂಬ ಯಜಮಾನನಾಗಿರುವುದು (ಆದ್ದರಿಂದ ಆಳ್ವಿಕೆ) ಮನೆಯ ಮಾರ್ಗದರ್ಶಕನಾಗಿರುವುದು ಎಂಬುದಾಗಿ ಅರ್ಥ.

**ತೀತನಿಗೆ 2:4,5**
**[4] ಇದಲ್ಲದೆ ಅವರು ಪ್ರಾಯದ ಸ್ತ್ರೀಯರಿಗೆ ನಿಮ್ಮ ಮೂಲಕ ದೇವರ ವಾಕ್ಯಕ್ಕೆ ದೂಷಣೆಯಾಗದಂತೆ ನೀವು ಗಂಡಂದಿರನ್ನೂ ಮಕ್ಕಳನ್ನೂ ಪ್ರೀತಿಸುವವರೂ ದಮೆಯುಳ್ಳವರೂ ಪತಿವ್ರತೆಯರೂ**
**[5] ಮನೆಯಲ್ಲೇ ಕೆಲಸಮಾಡುವವರೂ ಸುಶೀಲೆಯರೂ ನಿಮ್ಮ ಗಂಡಂದಿರಿಗೆ ಅಧೀನರೂ ಆಗಿರಬೇಕೆಂದು ಬುದ್ಧಿ ಕಲಿಸುವ ಹಾಗೆ ಭೋಧಿಸು.**

''ಮನೆಯ ಕಾವಲುಗಾರ'' (ಗ್ರೀಕ್‌ನಲ್ಲಿ ಓೈಕೋರೋಸ್) ಇದು 'ಓೈಕೊಸ್' (ಒಂದು ವಾಸಸ್ಥಳ, ಒಂದು ಕುಟುಂಬ, ಒಂದು ಮನೆ) ಮತ್ತು *'ಯುರೋಸ್'* (ಒಬ್ಬ ರಕ್ಷಕ) ಎಂಬುದರಿಂದ ಬಂದಿದೆ.

ಆದುದರಿಂದ ಓೈಕೋರೋಸ್ (ಗ್ರೀಕ್‌ನಲ್ಲಿ) = ಮನೆಯಲ್ಲಿ ಉಳಿಯುವವನು ಮನೆಕೆಲಸದಾಕೆ ಅಂದರೆ ಮನೆಯಲ್ಲಿಯೇ ಒರಗಿರುವವರು (ಒಂದು ''ಉತ್ತಮ ಮನೆಯ ಕಾವಲುಗಾರ''), ಮನೆಯಲ್ಲಿ ಕಾವಲುಗಾರ.

ಸ್ತ್ರೀಯರು ಆಕೆಯ ಮನೆಯ ವ್ಯವಹಾರಗಳನ್ನು ನೋಡಿಕೊಳ್ಳಬೇಕು ಮತ್ತು ಮನೆಯಲ್ಲಿ ಯಜಮಾನಿಯಾಗಿರಬೇಕು. ಅವಳು ಇಲ್ಲಿ ಸರಿಯಾದ ಸಮತೋಲವನ್ನು ಇಲ್ಲಿ ಹೇಗೆ ಕಂಡುಹಿಡಿಯುತ್ತಾಳೆ? ಸ್ತ್ರೀಯರು ಕೆಲಸದ ಸ್ಥಳದಲ್ಲಿ ಹೊರಗೆ ಒಬ್ಬ ಸ್ತ್ರೀಯು ತನ್ನನ್ನು ತೊಡಗಿಸಿಕೊಳ್ಳುವುದು ಸರಿಯಾದುದಾಗಿದೆಯಾ? ಉತ್ತರವು ''ಹೌದು.''

## ಕೆಲಸದ ಸ್ಥಳದಲ್ಲಿ ಸ್ತ್ರೀಯರಿಗಾಗಿ ಪ್ರಕರಣ

- ಸ್ತ್ರೀಯರು ಕೆಲಸದ ಸ್ಥಳದಲ್ಲಿ ಇರಬಾರದು ಎಂಬುದಾಗಿ ಸತ್ಯವೇದದಲ್ಲಿ ಎಲ್ಲಿಯೂ ನಿರ್ದಿಷ್ಟವಾಗಿ ಹೇಳಿಲ್ಲ. ಸತ್ಯವೇದದ ಅರ್ಥವಿವರಣೆಯಲ್ಲಿ ಸತ್ಯವೇದವು ಏನನ್ನಾದರೂ ವಿರೋಧಿಸದಿದ್ದರೆ, ಆಮೇಲೆ ಇತರೆ ಸಂಬಂಧಿತ ವಚನಭಾಗಗಳ ವ್ಯವಸ್ಥಿತ ಎಲ್ಲೆಗಳೊಡನೆ ಸರಿಯಾದ ತೀರ್ಮಾನವನ್ನು ನಾವು ಮಾಡಲೂ ದೇವರು ಅವಕಾಶ ಕೊಡುತ್ತಾನೆಂಬುದು ಇದರ ಅರ್ಥವಾಗಿದೆ.

ಉದಾಹರಣೆಗೆ, ''ಕರ್ತನಾದ ನಾನು ನಿಮ್ಮನ್ನು ಗುಣಪಡಿಸುವಾತನು'' ಎಂಬುದಾಗಿ ದೇವರು ಹೇಳಿದ್ದಾನೆ. ಆದರೆ ಆತನು ಯಾವುದೇ ಔಷಧಿಗಳನ್ನು ತೆಗೆದುಕೊಳ್ಳಬಾರದು ಅಥವಾ ವೈದ್ಯರ ಬಳಿ ಹೋಗಬಾರದು ಎಂಬುದಾಗಿ ನಮಗೆ ಹೇಳಿಲ್ಲ. ನಾವು ಸ್ವಸ್ಥತೆಗಾಗಿ ದೇವರನ್ನು ನೋಡಬೇಕು ಆದರೆ ನಾವು ಅಸ್ವಸ್ಥರಾಗಿರುವಾಗ ವೈದ್ಯರನ್ನು ಭೇಟಿಯಾಗುವುದು ಅಥವಾ ಔಷಧಿಗಳನ್ನು ತೆಗೆದುಕೊಳ್ಳುವುದು ತಪ್ಪಾದುದಲ್ಲ. ಅದೇ ರೀತಿಯಾಗಿ, ಸ್ತ್ರೀಯರ ಪ್ರಾಥಮಿಕ ಕರೆಯು ಆಕೆಯ ಗಂಡನಿಗೆ ಹೆಂಡತಿಯಾಗಿರುವುದು ಆಕೆಯ ಮಕ್ಕಳಿಗೆ ತಾಯಿಯಾಗಿರುವುದು ಮತ್ತು ಮನೆಯ ಯಜಮಾನಿಯಾಗಿರುವುದಾಗಿದೆ ಎಂಬುದಾಗಿ ದೇವರು ಹೇಳಿದ್ದಾನೆ. ಆದರೆ ಸ್ತ್ರೀಯರು ವ್ಯಾಪಾರ ಕ್ಷೇತ್ರದಲ್ಲಿ ತೊಡಗಿಸಿ ಕೊಳ್ಳಬಾರದೆಂಬುದಾಗಿ ಆತನು ಹೇಳಿಲ್ಲ ಆದ್ದರಿಂದ ವಚನ ಭಾಗಗಳನ್ನು ತಪ್ಪಾಗಿ ಅರ್ಥೈಸಿಕೊಳ್ಳಬಾರದು.

- ಯಾವುದೇ ಲಿಂಗಬೇಧವನ್ನು ಪರಿಗಣಿಸದೆ ಕೃಪೆಯ ವರಗಳು ಜನರಿಗೆ ಕೊಡಲ್ಪಟ್ಟಿದೆ.

**ರೋಮಾಪುರದವರಿಗೆ 12:6-8**

**[6] ದೇವರು ನಮಗೆ ಕೃಪೆಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ. ಹೊಂದಿದ ವರವು ಪ್ರವಾದನೆಯ ರೂಪವಾಗಿದ್ದರೆ. ನಮ್ಮ ವಿಶ್ವಾಸ ವರಕ್ಕೆ ತಕ್ಕ ಹಾಗೆ ಪ್ರವಾದನೆ ಹೇಳೋಣ**

**[7] ಅದು ಸಭಾ ಸೇವೆಯ ರೂಪವಾಗಿದ್ದರೆ ಸಭಾ ಸೇವೆಯನ್ನು ಮಾಡುತ್ತಾ ಇರೋಣ**

**[8] ಭೋಧಿಸುವವನು ಬೋಧಿಸುವದರಲ್ಲಿಯೂ ಬುದ್ಧಿ ಹೇಳುವವನು ಬುದ್ಧಿ ಹೇಳುವುದರಲ್ಲಿಯೂ ನಿರತನಾಗಿರಲಿ ದಾನಕೊಡುವವನು ಯಥಾರ್ಥ ಮನಸ್ಸಿನಿಂದ ಕೊಡಲಿ ಹಿರೀತನ ನಡಿಸುವವನು ಆ ಶಕ್ತಿಯಿಂದ ನಡಿಸಲಿ. ಕಷ್ಟದಲ್ಲಿರುವವರಿಗೆ ಉಪಕಾರ ಮಾಡುವವನು ಸಂತೋಷವಾಗಿ ಮಾಡಲಿ.**

ನಾಯಕತ್ವ, ಆಡಳಿತ, ಬೋಧನೆ, ಪ್ರವಾದಿಸುವುದು ಮತ್ತು ಉತ್ತಮ ಹಣಕಾಸಿನ ಸಾಮರ್ಥ್ಯದ ವರಗಳನ್ನು ಸ್ತ್ರೀಯರು ಹೊಂದಿದ್ದಾರೆ. ಇಂತಹ ವರಗಳು ಲಿಂಗದ ಆಧಾರದ ಮೇಲೆ ಕೊಡಲ್ಪಟ್ಟಿಲ್ಲ. ಇಂತಹ ವರಗಳು ಕಾರ್ಯನಿರ್ವಹಿಸುವಂತಹ ನಿಶ್ಚಿತವಾದ ಸ್ಥಳಗಳು ಮನೆಯಿಂದ ಹೊರಗಡೆಯ ಪರಿಸ್ಥಿತಿಗಳಲ್ಲಿ ಕೆಲಸದ ಸ್ಥಳದಲ್ಲಿ ಕಾರ್ಯನಿರ್ವಹಿಸುವುದಾಗಿದೆ.

ಜ್ಞಾನೋಕ್ತಿಗಳು 31 ರಲ್ಲಿ, ಸ್ತ್ರೀಯ ವಿವರಣೆಯಲ್ಲಿ ಮನೆಯಲ್ಲಿ ಆಕೆಯ ಕೌಶಲ್ಯತೆಗಳ ಕುರಿತು ಮಾತ್ರವಲ್ಲದೇ, ಆಕೆಯ ಮನೆಯ ಹೊರಗಡೆಯ ಕಾರ್ಯಪ್ರವೃತ್ತಿಗಳಲ್ಲಿ, ವ್ಯಾಪಾರ ವಹಿವಾಟಿನಲ್ಲಿ ಆಕೆಯ ತೊಡಗಿಸುವಿಕೆಯನ್ನು ಸ್ಪಷ್ಟವಾಗಿ ಸೂಚಿಸುವಂತಹ ಕೆಲವುಗಳಲ್ಲಿ ತೊಡಗಿಸಿಕೊಂಡಿರುವುದರಲ್ಲಿ ಆಕೆಯು ತೋರಿಸಲ್ಪಟ್ಟಿದ್ದಾಳೆ. ಇದು ಯಾಕಂದರೆ ಆಕೆಯು ಅದನ್ನು ಮಾಡಲೂ ದೇವರಿಂದ ಕೃಪೆ ಹೊಂದಿದ್ದಾಳೆ ಮತ್ತು ವರಗಳನ್ನು ಹೊಂದಿದ್ದಾಳೆ.

**ಜ್ಞಾನೋಕ್ತಿಗಳು 31: 16,19,24**

**[16] ಹೊಲವನ್ನು ನೋಡಿ, ಯೋಚಿಸಿ ಕೊಂಡುಕೊಳ್ಳುವಳು ತನ್ನ ಕೈಗೆಲಸದ ಲಾಭದಿಂದ ತೋಟಮಾಡಿಸುವಳು,**

**[19] ರಾಟೆಯ ಮೇಲೆ ಕೈ ಹಾಕಿ ಕದರನ್ನು ಹಿಡಿಯುವಳು,**

**[24] ಹಚ್ಚಡಗಳನ್ನು ನೇಯ್ದು ಮಾರಾಟ ಮಾಡುವಳು, ನಡುಕಟ್ಟುಗಳನ್ನು ವರ್ತಕನಿಗೆ ಒದಗಿಸುವಳು.**

- ಪುರುಷನು ತನ್ನ ಜವಾಬ್ದಾರಿಯನ್ನು ಕುಟುಂಬಕ್ಕೆ ಬಿಟ್ಟುಕೊಟ್ಟ ಸಂದರ್ಭಗಳಲ್ಲಿ.

ಇದು ಗೈರುಹಾಜರಾದ ತಂದೆ ಅಥವಾ ಕಳೆದು ಹೋದಂತಹ ಗಂಡನಿಗೆ ಸಂಬಂಧಿಸಿರುವುದಾಗಿದೆ. ಅಂತಹ ಸಂದರ್ಭಗಳಲ್ಲಿ ಮಕ್ಕಳನ್ನು ನೋಡಿಕೊಳ್ಳುವ ಕೆಲಸವನ್ನು ಸ್ತ್ರೀಯು ಹೊಂದಿದ್ದರೆ, ಆಕೆಯು ಮುಂದಾಳತ್ವವನ್ನು ತೆಗೆದುಕೊಳ್ಳಲು, ಹೊರಗೆ ಹೋಗಲು ಮತ್ತು ಸಂಪಾದಿಸಲೂ, ಮನೆಯನ್ನು ನಿರ್ವಹಿಸಲೂ ಮತ್ತು ಮಾರ್ಗದರ್ಶಿಸಲೂ ಸ್ವಾತಂತ್ರ್ಯತೆಯನ್ನು ಆಕೆಯು ಹೊಂದಿದ್ದಾಳೆ. *''ಆದದರಿಂದ ಪ್ರಾಯದ ವಿಧವೆಯರು ಮದುವೆ ಮಾಡಿಕೊಂಡು ಮಕ್ಕಳನ್ನು ಹೆತ್ತು ಮನೆಯ ಯಜಮಾನಿಯಾಗಿರುವುದು ನನಗೆ ಒಳ್ಳೇದಾಗಿ ತೋಚುತ್ತದೆ. ಹಾಗೆ ಮಾಡುವುದರಿಂದ ವಿರೋಧಿಗಳ ನಿಂದೆಗೆ ಆಸ್ಪದ ಕೊಡದೆ ಇರುವರು''* (1 ತಿಮೊಥೆಯನಿಗೆ 5:14) ಎಂಬುದಾಗಿ ಪೌಲನು ಉಪದೇಶಿಸಿದ್ದನ್ನು ಉಲ್ಲೇಖಿಸಲೂ ಮತ್ತು ಆಕೆಯು ಮನೆಯಲ್ಲಿಯೇ ಇದ್ದು ಕಾಗೆಗಳಿಂದ ಆಹಾರವನ್ನು ಹೊಂದುಕೊಳ್ಳಬೇಕೆಂದು ಎದುರುನೋಡುವುದು ಸರಿಯಾದುದಲ್ಲ.

- ಹಣಕಾಸಿನ ಕಾರಣಗಳಿಂದಾಗಿ ಇದು ಅಗತ್ಯವಾಗಬಹುದು.

ಗಂಡನು ಮನೆಯಲ್ಲಿಯೇ ಇದ್ದರೆ ಮತ್ತು ಕೆಲಸ ಮಾಡುತ್ತಿಲ್ಲವಾದರೆ ಅಥವಾ ಅವನು ಸಂಪಾದಿಸುತ್ತಿರುವುದು ಮನೆಗೆ ಸಾಕಾಗುತ್ತಿಲ್ಲದಿದ್ದರೆ, ಆವಾಗ ಸ್ತ್ರೀಯರು ಹೊರಗಡೆ ಹೋಗಬಹುದು ಮತ್ತು ಕೆಲಸಮಾಡಿ ಹಣಕಾಸಿನಲ್ಲಿ ಸಹಾಯ ನೀಡಬಹುದು, ಜೊತೆಗೆ ಮನೆಯನ್ನು ನಿರ್ವಹಿಸಬಹುದು.

## ಪ್ರತಿಬಿಂಬಿಸುವಿಕೆ

1) ಮಹಿಳೆ ಕೆಲಸದ ಸ್ಥಳದಲ್ಲಿರುವುದು ಸೂಕ್ತ ಎಂದು ನೀವು ಹೇಗೆ ತೀರ್ಮಾನಿಸುವಿರಿ?

# 2

# ಕೆಲಸದ ಸ್ಥಳದಲ್ಲಿನ ಸ್ತ್ರೀಯರು ಕುಟುಂಬ, ಕೆಲಸ ಮತ್ತು ಅವರ ಸ್ವಂತ ಆತ್ಮೀಕತೆಯನ್ನು ಹೇಗೆ ಸಮತೋಲನ ಮಾಡಬಹುದು?

ಕುಟುಂಬ, ಕೆಲಸ ಮತ್ತು ಅವರ ಸ್ವಂತ ಆತ್ಮೀಕತೆಯನ್ನು ಸಮತೋಲನಗೊಳಿಸುವುದು ದುಡಿಯುವ ಸ್ತ್ರೀಯರಿಗೆ ಪುರುಷರಿಗಿಂತ ದೊಡ್ಡದಾಗಿದೆ. ಪುರುಷರು ಕೆಲಸದಿಂದ ಮನೆಗೆ ಹಿಂತಿರುಗಿ ಬರುತ್ತಾರೆ ಮತ್ತು ಸೇವೆ ಹೊಂದಲು ಎದುರು ನೋಡುತ್ತಾರೆ. ಆದರೆ ದುಡಿಯುವ ಸ್ತ್ರೀಯರು ಹೊರಗಡೆ ಹೋಗುತ್ತಾರೆ ಮತ್ತು ಕೆಲಸ ಮಾಡುವುದು ಮಾತ್ರವಲ್ಲದೇ ಮನೆಗೆ ಹಿಂತಿರುಗಿ ಬಂದಾಗ ಆಕೆಯ ಗಂಡ ಮತ್ತು ಮಕ್ಕಳಿಗೆ ಸೇವೆ ಸಲ್ಲಿಸಲು ಪುನಃ ಕೆಲಸ ಮಾಡುತ್ತಾಳೆ.

## ದೇವರು ಸ್ತ್ರೀಯನ್ನು ವ್ಯಕ್ತಿಯಾಗಿ ಗೌರವಿಸುತ್ತಾನೆ

ದೇವರು ಸ್ತ್ರೀಯನ್ನು ವ್ಯಕ್ತಿಗತವಾಗಿ ಲಿಂಗದ ಸ್ವತಂತ್ರತೆಯಲ್ಲಿ ಅವರನ್ನು ಗೌರವಿಸುತ್ತಾನೆಂಬುದನ್ನು ಅರಿತುಕೊಳ್ಳಬೇಕು ಆದಿಕಾಂಡ 3:16 ರ ಪ್ರಕಾರವಾಗಿ, ಬಿದ್ದುಹೋದದ್ದರ ಶಾಪಗಳಲ್ಲಿ ಆಕೆಯ ಗಂಡನ ಕಡೆಗೆ ಸ್ತ್ರೀಯ ಅಪೇಕ್ಷೆಯು ಸಹ ಒಂದಾಗಿದೆ. ಅದರ ಫಲಿತಾಂಶವಾಗಿ, ಪ್ರತಿಯೊಬ್ಬ ಸ್ತ್ರೀಯು ಆಕೆಯ ಗಂಡನನ್ನು ಆಕೆಯ ಗುರುತಿನ ಮೂಲಕವಾಗಿ ನೋಡುತ್ತಾರೆ. ಅವನ ಕೊನೆಯ ಹೆಸರಿನ ಶೀರ್ಷಿಕೆಯನ್ನು ಆಕೆಯು ಪೂರ್ವನಿಯೋಜಿತವಾಗಿ ಸೇರಿಸಿಕೊಂಡಿರುತ್ತಾಳೆ. ಆಕೆಯ ಸಂಪೂರ್ಣ ಪ್ರಪಂಚವು ಆಕೆಯ ಸ್ವಯಂ ಮೌಲ್ಯವು ಸಹ ಅವನಿಂದ ಬಂದಿರುವುದಾಗಿ ಕಾಣಿಸುತ್ತದೆ.

ಸ್ತ್ರೀಯರೇ, ನಿಮ್ಮ ದೃಷ್ಟಿಯನ್ನು ನಿಮ್ಮ ಗಂಡನಿಂದ ತೆಗೆಯಿರಿ ಮತ್ತು ದೇವರ ಮೇಲೆ ನಿಮ್ಮ ಕಣ್ಣುಗಳ ದೃಷ್ಟಿಯನ್ನಿಡಿರಿ ಯಾಕಂದರೆ ಆತನು ನಿಮ್ಮನ್ನು ಒಬ್ಬ ವ್ಯಕ್ತಿಯಾಗಿ ಗೌರವಿಸುತ್ತಾನೆ. ನಿಮ್ಮ ಅಪೇಕ್ಷೆಯು ದೇವರ ಕಡೆಗೆ ಇರಬೇಕು. ನಿಮ್ಮ ಮೌಲ್ಯ ಮತ್ತು ಗುರುತಿಗಾಗಿ ಆತನನ್ನು ನೋಡಿರಿ.

**ಗಲಾತ್ಯದವರಿಗೆ 3:28**
**ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವುದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ ಗಂಡು ಹೆಣ್ಣು ಎಂದೂ ಈ ಭೇದವಿಲ್ಲ.**

ದೇವರ ರಾಜ್ಯದಲ್ಲಿ ಲಿಂಗ ಭೇದವಿಲ್ಲ. ಪುರುಷ ಮತ್ತು ಸ್ತ್ರೀಯರು ಸಮಾನಾಂತರವಾಗಿ ವಿಮೋಚನೆ ಮತ್ತು ಆಶೀರ್ವಾದಗಳು, ವರಗಳು, ಕರೆಗಳು, ಮತ್ತು ದೇವರಿಂದ ಕೊಡಲ್ಪಟ್ಟಂತಹ ಸೇವಾ ಕಾರ್ಯ ಸ್ಥಾನಗಳನ್ನು ಹೊಂದಿರುವ ಜೀವಿಗಳಾಗಿದ್ದಾರೆ.

**1 ಕೊರಿಂಥದವರಿಗೆ 11:3,11,12**
**3 ಆದರೂ ಒಂದು ಸಂಗತಿಯನ್ನು ನೀವು ತಿಳಿಯಬೇಕೆಂದು ನನ್ನ ಇಷ್ಟ ಅದೇನೆಂದರೆ ಪ್ರತಿ ಪುರುಷನಿಗೂ ಕ್ರಿಸ್ತನು ತಲೆ, ಸ್ತ್ರೀಗೆ ಪುರುಷನು ತಲೆ ಕ್ರಿಸ್ತನಿಗೆ ದೇವರು ತಲೆ ಆಗಿದ್ದಾನೆ.**
**11 ಆದರೂ ಕರ್ತನ ಸಂಬಂಧದಲ್ಲಿ ಪುರುಷರಿಲ್ಲದೆ ಸ್ತ್ರೀಯರೂ ಸ್ತ್ರೀಯರಿಲ್ಲದೆ ಪುರುಷರೂ ಸಂಪೂರ್ಣರಲ್ಲ**
**12 ಸ್ತ್ರೀಯು ಪುರುಷನಿಂದ ಉತ್ಪತ್ತಿಯಾದಳು ಹಾಗೆಯೇ ಪುರುಷನು ಸ್ತ್ರೀ ಮೂಲಕವಾಗಿ ಹುಟ್ಟುತ್ತಾನೆ. ಸಮಸ್ತಕ್ಕೂ ದೇವರೇ ಮೂಲ ಕಾರಣನು.**

ಅದೇ ಅರ್ಥದಲ್ಲಿ ಒಬ್ಬ ಪುರುಷನು ಚಿತ್ತ ಪೂರ್ವಕವಾಗಿ ತನ್ನನ್ನು ಕ್ರಿಸ್ತನ ಮುಖ್ಯತ್ವದ ಅಧೀನಕ್ಕೆ ತರುತ್ತಾನೆ ಅಥವಾ ಕ್ರಿಸ್ತನಂತೆ, ಆತನು ತಂದೆಗೆ ಸರಿಸಮಾನನಾಗಿದ್ದರೂ ಭೂಮಿಯ ಮೇಲಿದ್ದಾಗ ತಂದೆಯ ಚಿತ್ತಕ್ಕೆ ಉದ್ದೇಶ ಪೂರ್ವಕವಾಗಿ ತನ್ನನ್ನು ವಿಧೇಯತೆಗೆ ಒಪ್ಪಿಸಿಕೊಟ್ಟನು ಆದ್ದರಿಂದ ಒಬ್ಬ ಸ್ತ್ರೀಯು ಪುರುಷನ ಮುಖಂಡತ್ವದ ಅಧೀನಕ್ಕೆ ತನ್ನನ್ನು ಚಿತ್ತಪೂರ್ವಕವಾಗಿ ತರಬೇಕು. ಇದು ಆಕೆಯು ಏನಾಗಿದ್ದಾಳೆ ಇಲ್ಲವೇ ಅದು ಪುರುಷನಿಗಿಂತ ಕೆಳಮಟ್ಟದವಳು ಎಂಬಂತಹ ಯಾವುದೇ ರೀತಿಯಲ್ಲಿ ಕಡಿಮೆಯಾಗುವುದಿಲ್ಲ. ಪುರುಷನು ಮತ್ತು ಸ್ತ್ರೀಯು ಕರ್ತನಲ್ಲಿ ಪರಸ್ಪರ ಅವಲಂಬಿತರಾಗಿದ್ದಾರೆ (1 ಕೊರಿಂಥದವರಿಗೆ 11:11). ಮತ್ತು ಪುರುಷ ಮತ್ತು ಸ್ತ್ರೀಯರಿಬ್ಬರೂ ಅವರ ಜೀವಿತ, ಗುರುತು ಮತ್ತು ಕರ್ತನಿಂದ ಬೇರೆ ಎಲ್ಲವುಗಳನ್ನು ಪಡೆಯುತ್ತಾರೆ.

## ನಿಮ್ಮ ಮೊದಲ ಪ್ರೀತಿಯನ್ನು ಅಪ್ಪಿಕೊಳ್ಳಿರಿ

ಸ್ತ್ರೀಯರೆ ನಿಮ್ಮ ಮೊದಲ ಪ್ರೀತಿಯು ನಿಮ್ಮ ಗಂಡನಲ್ಲ! ನಿಮ್ಮ ಪ್ರಾಥಮಿಕ ದೃಷ್ಟಿಯು ದೇವರೊಂದಿಗೆ ನಿಕಟವಾದ ಸಂಬಂಧವನ್ನು ಕಟ್ಟಿಕೊಳ್ಳುವುದಾಗಿದೆ.

**ಲೂಕ 10:38-41**

**[38] ಅವರು ಸಂಚಾರ ಮಾಡುತ್ತಿರುವಾಗ ಆತನು ಒಂದಾನೊಂದು ಹಳ್ಳಿಗೆ ಬಂದನು. ಅಲ್ಲಿ ಮಾರ್ಥಳೆಂಬ ಒಬ್ಬ ಸ್ತ್ರೀಯು ಆತನನ್ನು ತನ್ನ ಮನೆಯಲ್ಲಿ ಇಳಿಸಿಕೊಂಡಳು.**

**[39] ಆಕೆಗೆ ಮರಿಯಳೆಂಬ ಒಬ್ಬ ತಂಗಿ ಇದ್ದಳು. ಈಕೆಯು ಸ್ವಾಮಿಯ ಪಾದಗಳ ಬಳಿಯಲ್ಲಿ ಕೂತುಕೊಂಡು ಆತನ ವಾಕ್ಯವನ್ನು ಕೇಳುತ್ತಿದ್ದಳು.**

**[40] ಆದರೆ ಮಾರ್ಥಳು ಬಹಳ ಸೇವೆಯ ವಿಷಯವಾಗಿ ಬೇಸತ್ತು ಆತನ ಬಳಿಗೆ ಬಂದು-ಸ್ವಾಮಿ ನನ್ನ ತಂಗಿಯು ಸೇವೆಗೆ ನನ್ನೊಬ್ಬಳನ್ನೇ ಬಿಟ್ಟಿದ್ದಾಳೆ. ಇದಕ್ಕೆ ನಿನಗೆ ಚಿಂತೆಯಿಲ್ಲವೋ? ನನಗೆ ನೆರವಾಗಬೇಕೆಂದು ಆಕೆಗೆ ಹೇಳು ಅಂದಳು**

**[41] ಸ್ವಾಮಿಯು ಆಕೆಗೆ ಮಾರ್ಥಳೇ, ಮಾರ್ಥಳೇ, ನೀನು ಅನೇಕ ವಿಷಯವಾಗಿ ಚಿಂತೆಯಲ್ಲಿಯೂ ಗಡಿಬಿಡಿಯಲ್ಲಿಯೂ ಸಿಕ್ಕಿಕೊಂಡಿದ್ದೀ.**

ಈ ಒಂದು ವಾಕ್ಯದ ಭಾಗದಲ್ಲಿ, ಮಾರ್ಥಳು ಸಾಂಕೇತಿಕವಾಗಿ ಒಬ್ಬ ವಿಶಿಷ್ಟ ಗೃಹಿಣಿಯಾಗಿದ್ದಾಳೆ, ಎಲ್ಲಾ ಅಡಿಗೆ ಕೆಲಸಗಳನ್ನು ಮಾಡುತ್ತಿದ್ದಾಳೆ ಮತ್ತು ಯೇಸುವಿಗೆ ಸೇವೆ ಮಾಡುವುದರ ಮೇಲೆ ದೃಷ್ಟಿಯನ್ನಿಟ್ಟಿದ್ದಾಳೆ, ಆದರೆ ಯೇಸುವು ಆಕೆಗೆ ವಿಶ್ರಮಿಸಲು ಮತ್ತು ಆತನ ಪಾದದ ಬಳಿಯಲ್ಲಿ ಕುಳಿತುಕೊಳ್ಳಲೂ ಮತ್ತು ಮರಿಯಳು ಮಾಡುತ್ತಿರುವುದನ್ನು ಮಾಡಲೂ ಹೇಳುತ್ತಾನೆ. ಸ್ತ್ರೀಯರೇ ನೀವು ಒಬ್ಬ ''ಮಾರ್ಥಳಾಗಿ'' ಕಂಡು ಬರುವುದಕ್ಕೆ ಮೊದಲೂ ನೀವು ಒಬ್ಬ ''ಮರಿಯಳಾಗಿರುವುದು'' ನಿಮ್ಮ ಆದ್ಯತೆಯಾಗಿರಬೇಕು. ನೀವು ಯೇಸುವಿನ ಪಾದದ ಬಳಿಯಲ್ಲಿ ಕುಳಿತಿರುವಾಗ ನಿಮ್ಮ ಗಂಡನನ್ನು ಮಾರ್ಥಳಂತೆ ಮನೆಯಲ್ಲಿ ಕೆಲಸ ಮಾಡುವಂತೆ ಮಾಡಿ ನೀವು ಮರಿಯಳಂತೆ ಇರಬೇಕೆಂಬುದಾಗಿ ಖಂಡಿತವಾಗಿ ಇದರ ಅರ್ಥವಲ್ಲ. ಅದು ನಿಮ್ಮ ಜವಾಬ್ದಾರಿಯನ್ನು ವಿಫಲಗೊಳಿಸುತ್ತದೆ. ನೀವು ಇವೆರಡರಲ್ಲೂ ಇರಬೇಕು!

## ಹೆಂಡತಿ, ತಾಯಿ ಮತ್ತು ಗೃಹಿಣಿಯಾಗಿ ನಿಮ್ಮ ಪ್ರಾಥಮಿಕ ಕರೆಯನ್ನು ನೆರವೇರಿಸಿರಿ ಮತ್ತು ಅಪ್ಪಿಕೊಳ್ಳಿರಿ

ದುಡಿಯುವ ಅನೇಕ ಸ್ತ್ರೀಯರಿಗೆ ಇದು ಒಂದು ದೊಡ್ಡ ಸವಾಲಾಗಿದೆ. ಕಛೇರಿಯಲ್ಲಿ ಅವರ ದುಡಿಮೆಗಾಗಿ ಪ್ರತಿ ತಿಂಗಳ ಕೊನೆಯಲ್ಲಿ ಸಂಬಳ ಪಡೆಯುತ್ತಾರೆ ಮತ್ತು ಕೆಲವು ಬಹುಮಾನಗಳು, ಗುರುತಿಸುವಿಕೆ ಅಥವಾ ಪದೋನ್ನತಿ ಪಡೆಯಬಹುದು ಅದು ಒಂದು ಸಾಧನೆಯ ಗ್ರಹಿಕೆಯನ್ನು ಅವರಿಗೆ ಕೊಡುತ್ತದೆ. ಇನ್ನೊಂದು ಕಡೆಯಲ್ಲಿ ಮನೆಯಲ್ಲಿ, ಇವುಗಳಲ್ಲಿ ಯಾವುದನ್ನು

ಸ್ತ್ರೀಯರು ಪಡೆದುಕೊಳ್ಳುವುದಿಲ್ಲ. ಆದರೆ ಈ ಪ್ರಾಥಮಿಕ ಕರೆಯಲ್ಲಿ ಸ್ತ್ರೀಯರು ವಿಫಲವಾದರೆ ಕೆಲಸದ ಸ್ಥಳದಲ್ಲಿನ ಯಶಸ್ಸಿಗೆ ಯಾವುದೇ ಬೆಲೆಯಿರುವುದಿಲ್ಲ.

**ಸೂಚನೆ:** ನಿಶ್ಚಯವಾಗಿ, ನೀವು ಮದುವೆಯಾಗಿರದಿದ್ದರೆ, ಇದು ನಿಮಗೆ ಇನ್ನೂ ಅನ್ವಯವಾಗುವುದಿಲ್ಲ. ಅಥವಾ ನೀವು ವರ್ಷಗಳಲ್ಲಿ ಉತ್ತಮವಾಗಿ ಮುಂದುವರಿದರೆ, ಇದನ್ನು ನೀವು ಈಗಾಗಲೇ ನೆರವೇರಿಸುವಂತದ್ದಾಗಿದೆ.

## ಕ್ರಿಸ್ತನ ಅಂಗದಲ್ಲಿ ನಿಮ್ಮ ಕರೆಯನ್ನು ಅಪ್ಪಿಕೊಳ್ಳಿರಿ

ಸ್ತ್ರೀಯರೇ, ಕೆಲಸದ ಸ್ಥಳದಲ್ಲಿ ನಿಮ್ಮ ಕರೆಯನ್ನು ಹೊಂದಿಕೊಳ್ಳುವ ಮೊದಲು, ಪ್ರತಿಯೊಬ್ಬ ಸ್ತ್ರೀಯು ಕ್ರಿಸ್ತನ ದೇಹದಲ್ಲಿ ಒಂದು ಜಾಗವನ್ನು ಹೊಂದಿದ್ದಾರೆ ಎಂಬುದನ್ನು ನೆನಸಿಕೊಳ್ಳಬೇಕು. ಸ್ತ್ರೀಯರು ನಿರ್ಲಕ್ಷ್ಯ ತೋರಿಸುತ್ತಾರೆ ಅಥವಾ ಮರೆತು ಕೆಲಸಕ್ಕೆ ಧಾವಿಸುತ್ತಾರೆ. ಇಂದು ಕ್ರಿಸ್ತನ ಅಂಗದಲ್ಲಿ ಅನೇಕ ತಾಯಂದಿರು ಕಳೆದು ಹೋಗಿದ್ದಾರೆ. ಯೌವನಸ್ಥ ಸ್ತ್ರೀಯರಿಗೆ ದೈವೀಕವಾಗಿ ಪಾತ್ರದ ಮಾದರಿಗಳಾಗಿರಬೇಕಾಗಿದ್ದಂತಹ ಸ್ತ್ರೀಯು ದೇವರ ಮನೆಯಲ್ಲಿ ಕಾಣೆಯಾಗಿದ್ದಾರೆ ಯಾಕೆಂದರೆ ಅವರು ಹೊರಗಡೆ ಕೆಲಸ ಮಾಡುವುದರಲ್ಲಿ ನಿರತರಾಗಿದ್ದಾರೆ. ಕ್ರಿಸ್ತನ ದೇಹದಲ್ಲಿ ಪ್ರತಿಯೊಬ್ಬ ಸ್ತ್ರೀಯು ದೈವ ನೇಮಿತ ಸೇವೆಯನ್ನು ಹೊಂದಿದ್ದಾರೆ. ಕ್ರಿಸ್ತನ ಅಂಗದಲ್ಲಿ ನಿಮ್ಮ ಕಾರ್ಯ ವೈಖರಿಗಳನ್ನು ಗುರುತಿಸಿರಿ ಮತ್ತು ನೆರವೇರಿಸಿರಿ!

## ಕೆಲಸದ ಸ್ಥಳಕ್ಕೆ ನಿಮ್ಮ ಕರೆಯನ್ನು ಅಪ್ಪಿಕೊಳ್ಳಿರಿ

ಕೆಲಸದ ಸ್ಥಳಕ್ಕೆ ಕರೆಯಲ್ಪಟ್ಟಂತಹ ಸ್ತ್ರೀಯರು ಅಂಗೀಕರಿಸುವುದರಿಂದ, ಅಪ್ಪಿಕೊಳ್ಳುವುದರಿಂದ ದೇವರ ರಾಜ್ಯಕ್ಕೆ ಒಂದು ಮಹತ್ವದ ಕೊಡುಗೆ ನೀಡಬಹುದು ಮತ್ತು ಕೆಲಸದ ಸ್ಥಳಕ್ಕೆ ಅವರ ಕರೆಯನ್ನು ನೆರವೇರಿಸಬಹುದು.

## ಪ್ರಾಯೋಗಿಕ ಸೂಚನೆಗಳು

- **ನಿಮ್ಮ ಹೃದಯವು ಎಲ್ಲಿದೆ ಎಂಬುದನ್ನು ಅರ್ಥಮಾಡಿಕೊಳ್ಳಿರಿ.** ನಿಮ್ಮ ಹೃದಯವು ಮನೆಯಲ್ಲಿ ತೃಪ್ತಿಕರವಾಗಿದ್ದರೆ ಯಾವುದೇ ತಪ್ಪಿಲ್ಲ. ನಿಮ್ಮ ಹೃದಯವು ಕೆಲಸದ ಸ್ಥಳದಲ್ಲಿ ಗುರುತು ಮಾಡಬೇಕೆಂದು ಅಪೇಕ್ಷಿಸಿದರೆ, ಬಹುಶಃ ಅದು ನೀವು ಪರಿಗಣಿಸಬೇಕಾದ ವಿಷಯವಾಗಿರುತ್ತದೆ.

- **ನಿಮ್ಮ ವರಗಳು ಮತ್ತು ಕರೆಗಳನ್ನು ತಿಳಿಯಿರಿ.** ಕೆಲಸದ ಸ್ಥಳಕ್ಕಾಗಿ ದೇವರು ನಿಮ್ಮನ್ನು ತರಬೇತಿಗೊಳಿಸಿದ್ದಾನೆಯೇ ಮತ್ತು ವರಗಳನ್ನು ನೀಡಿದ್ದಾನೆಯೇ? ಆಮೇಲೆ ಆತನು ನಿಮಗೆ ವಹಿಸಿಕೊಟ್ಟಿರುವುದನ್ನು ವ್ಯರ್ಥಮಾಡಬೇಡಿರಿ.
- **ನಿಮ್ಮ ಆದ್ಯತೆಗಳನ್ನು ತಿಳಿಯಿರಿ.** ನಿಮ್ಮ ಹೃದಯವು ಕೆಲಸದ ಸ್ಥಳದಲ್ಲಿ ಒಂದು ಗುರುತು ಮಾಡಿಕೊಳ್ಳಬೇಕೆಂದು ಅಪೇಕ್ಷಿಸುವುದು ಸತ್ಯವಾಗಿದೆ ಮತ್ತು ಅದನ್ನು ಮಾಡಲೂ ನೀವು ವರಗಳಿಂದ ಕೂಡಿರಬಹುದು, ಅದು ಒಂದು ಕಾಲಕ್ಕೆ ನಿಮ್ಮ ಆದ್ಯತೆಗಳು ನಿಮ್ಮ ಮಕ್ಕಳ ಕಡೆಗೆ ಇರುವ ಸಾಧ್ಯತೆಯಿದೆ. ಅವರು ತುಂಬಾ ಚಿಕ್ಕವರಾಗಿರುವಾಗ ವಿಶೇಷವಾಗಿ ಇದು ಸತ್ಯವಾಗಿರುತ್ತದೆ. ನೀವು ಕೆಲಸದ ಸ್ಥಳಕ್ಕೆ ಹೆಜ್ಜೆಯನ್ನಿಡುವುದರ ಬದಲಿಗೆ ನಿಮ್ಮ ಮಕ್ಕಳ ಜೀವಿತದಲ್ಲಿನ ಆ ಋತುವಿನಲ್ಲಿ ತ್ಯಾಗಪೂರ್ವಕವಾಗಿ ತೊಡಗಿಸಿಕೊಳ್ಳುವ ಆಯ್ಕೆಯನ್ನು ಮಾಡುವಿರಿ.
- **ನಿಮ್ಮ ಮಿತಿಗಳನ್ನು ತಿಳಿದುಕೊಳ್ಳಿರಿ.** ನಮ್ಮಲ್ಲಿ ಪ್ರತಿಯೊಬ್ಬರು ಬಿದ್ದು ಹೋಗದೇ ಎಷ್ಟು ವಿಸ್ತರಿಸಬಹುದು ಎಂಬುದರ ಬಗ್ಗೆ ವಿಭಿನ್ನ ಸಾಮರ್ಥ್ಯಗಳನ್ನು ಹೊಂದಿದ್ದೇವೆ. ನಿಮ್ಮ ಇತಿಮಿತಿಗಳನ್ನು ನೀವು ತಿಳಿದಿರಬೇಕು. ಹೆಂಡತಿಯಾಗಿ, ತಾಯಿಯಾಗಿ, ಗೃಹಿಣಿಯಾಗಿ ಮತ್ತು ಕೆಲಸದ ಸ್ಥಳದಲ್ಲಿ ಒಬ್ಬ ಸ್ತ್ರೀಯಾಗಿರುವುದು ತುಂಬಾ ಸವಾಲಾಗಿರುವುದಾಗಿದೆ. ನಿಮಗೆ ವ್ಯಾಪಿಸಲು ಸಾಮಾರ್ಥ್ಯವಿದ್ದರೆ ಅದನ್ನು ಮಾಡಿರಿ! ಇಲ್ಲವಾದರೆ ನಿಮ್ಮ ಇತಿಮಿತಿಗಳಲ್ಲಿಯೇ ಇರ್ರಿ!

ನೀವು ಕೆಲಸ ಮಾಡಲೂ ಕರೆಯಲ್ಪಟ್ಟಿದ್ದರೆ, ತಪ್ಪಿತಸ್ಥರೆಂದು ಭಾವಿಸಬೇಡಿರಿ, ದೇವರು ವರಗಳನ್ನು ಕೊಟ್ಟಿದ್ದಾನೆ ಮತ್ತು ನಿಮಗೆ ಕೃಪೆ ನೀಡಿದ್ದಾನೆ, ಅದರ ಅರ್ಥವು ನಿಮ್ಮ ಕೆಲಸದ ಸ್ಥಳದಲ್ಲಿ ನೀವು ಇರಬೇಕೆಂದು ಆತನು ಬಯಸುತ್ತಾನೆ. ಆದ್ದರಿಂದ ಆ ಒಂದು ಅವಕಾಶ ಉಪಯೋಗಿಸಿಕೊಳ್ಳಿರಿ. ಒಬ್ಬ ಗೃಹಿಣಿಯಾಗಿ ಕರೆಯಲ್ಪಟ್ಟಿದ್ದರೆ, ನೀವು ''ವ್ಯವಸ್ಥಾಪಕಿ'' ಅಥವಾ ''ಸಿಇಒ'' ಎಂಬ ಶೀರ್ಷಿಕೆ ಹೊಂದಿಲ್ಲ ಆದರೆ ಬರೀ ''ಹೆಂಡತಿ'' ಮತ್ತು ''ತಾಯಿ'' ಎಂಬುದಾಗಿ ಕೆಳಮಟ್ಟದವರಾಗಿ ಭಾವಿಸಿಕೊಳ್ಳಬೇಡಿರಿ. ನಿಮ್ಮ ಪ್ರಥಮ ಪ್ರೀತಿಯಾದ ದೇವರಿಗೆ ಅಪ್ಪಿಕೊಂಡಿದ್ದರೆ ಮತ್ತು ನಿಮ್ಮ ಪ್ರಾಥಮಿಕ ಕರೆಗೆ ಅಪ್ಪಿಕೊಂಡಿದ್ದರೆ ನಿಮ್ಮ ಬಹುಮಾನವು ದೊಡ್ಡದಾಗಿರುತ್ತದೆ. ಅಷ್ಟು ಮಾತ್ರವೇ ಆತನು ನಿಮ್ಮಿಂದ

ಕೇಳುತ್ತಿರುವುದು. ನಿಮ್ಮಲ್ಲಿ ಪ್ರತಿಯೊಬ್ಬರು ವೈಯಕ್ತಿಕವಾಗಿ ದೇವರ ಕರೆಯನ್ನು ಮತ್ತು ನಿಮ್ಮ ಜೀವಿತಕ್ಕಾಗಿರುವ ಆತನ ಚಿತ್ತವನ್ನು ನೆರವೇರಿಸಬೇಕೆಂಬುದಾಗಿ ನೀವು ನೆನಪಿನಲ್ಲಿಟ್ಟುಕೊಳ್ಳಬೇಕು.

## ಪ್ರತಿಬಿಂಬಿಸುವಿಕೆ

1) ಮಹಿಳೆ ತನ್ನ ಜೀವನ ಮತ್ತು ಗುರುತನ್ನು ಪಡೆಯಲು ಕರ್ತನಿಂದ ಅಳವಡಿಸಿಕೊಳ್ಳಬಹುದಾದ ಕೆಲವು ವಿಷಯಗಳು ಯಾವುವು?

# 3
# ಕೆಲಸದ ಸ್ಥಳದ ಸವಾಲುಗಳನ್ನು ಸ್ತ್ರೀಯರು ಹೇಗೆ ನಿಭಾಯಿಸುತ್ತಾರೆ?

## ಒತ್ತಡ

ಈ ವಿಭಾಗವು ಪುರುಷ ಮತ್ತು ಸ್ತ್ರೀಯರಿಬ್ಬಗೂ ಅನ್ವಯಿಸುತ್ತದೆ. ನಾವು ಮನೆಯಲ್ಲಿ ಮತ್ತು ಕೆಲಸದ ಸ್ಥಳಗಳೆರಡರಲ್ಲೂ ಜವಬ್ದಾರಿಗಳನ್ನು ಹೊಂದಿರುವುದರಿಂದ ನಮ್ಮಲ್ಲಿ ಎಲ್ಲರೂ ಒತ್ತಡವನ್ನು ಅನುಭವಿಸುತ್ತಾರೆ. ನನ್ನ ಜೀವಿತದಲ್ಲಿ ಮನೆಯನ್ನು ನಿರ್ವಹಿಸುವುದು. ವ್ಯಾಪಾರ ವ್ಯವಹಾರ ಮತ್ತು ಸಭೆಯನ್ನು ನೋಡಿಕೊಳ್ಳುವುದನ್ನು ಗಮನಿಸಿದರೆ, ಒತ್ತಡವನ್ನು ಪರಿಹರಿಸಲೂ ಮತ್ತು ಒತ್ತಡದೊಂದಿಗೆ ನಿಭಾಯಿಸುವುದಕ್ಕೆ ನನಗೆ ಎರಡು ವಿಷಯಗಳು ಸಹಾಯ ಮಾಡಿವೆ ಅವು ಯಾವುದೆಂದರೆ:

- ಕರ್ತನ ಮೇಲೆ ಅವಲಂಬಿಸಿಕೊಳ್ಳುವುದನ್ನು ಕಲಿಯುವುದು.

**ಯೆಶಾಯ 26:3**
**ಸ್ಥಿರಚಿತ್ತನನ್ನು ಶಾಂತಿಯಲ್ಲಿ ನೆಲೆಗೊಳಿಸಿ ಕಾಯುವಿ ಅವನಿಗೆ ನಿನ್ನಲ್ಲಿ ಭರವಸವಿದೆ.**

ನಿರಾಕರಿಸದೆ ''ತೊಂದರೆಯ ಪರಿಸ್ಥಿತಿಗಳು'' ಅಸ್ತಿತ್ವದಲ್ಲಿರುತ್ತವೆ ಅವುಗಳ ಮೇಲೆ ವಾಸಿಸುವುದಕ್ಕೆ ಬದಲಾಗಿ ಅವುಗಳಿಗಿಂತ ದೊಡ್ಡವನಾದ ಕರ್ತನ ಮೇಲೆ ನಾವು ನೆಲೆಸಬೇಕು. ಬಿರುಗಾಳಿಗಿಂತ ಮೇಲಿರುವ ಅರಸನು ಆತನು ಆಗಿದ್ದಾನೆ ಮತ್ತು ಅಲೆಗಳು ಮತ್ತು ಬಿರುಗಾಳಿಗಳ ಮೇಲೆ ನೆಲೆಸುವುದರ ಬದಲಿಗೆ ಅವುಗಳಿಗಿಂತ ಮೇಲಿರುವ ಅರಸನನ್ನು ದೃಷ್ಟಿಸುವ ಆಯ್ಕೆಯನ್ನು ನಾವು ಮಾಡುವಾಗ, ಆತನು ನಮ್ಮನ್ನು ಪರಿಪೂರ್ಣ ಸಮಾಧಾನದಲ್ಲಿರುಸುತ್ತಾನೆ. ಕೆಲವು ಬಾರಿ ನಾವು ಸಹನೆಯನ್ನು ಕಳೆದುಕೊಳ್ಳುತ್ತೇವೆ ಮತ್ತು ಉದ್ವಿಗ್ನತೆಗಳನ್ನು ಹೊಂದುತ್ತೇವೆ. ಆದರೆ ಆ ಒಂದು ಸ್ಥಿತಿಯಲ್ಲಿ ನಾವು ತುಂಬಾ ಸಮಯವಿರುವುದಿಲ್ಲ. ನಮ್ಮನ್ನು ಪುನಃ ಸಹಜ ಸ್ಥಿತಿಗೆ ಬರುತ್ತೇನೆ ಮತ್ತು ಬಿರುಗಾಳಿಗಿಂತ ಮೇಲಿರುವ ಕರ್ತನ ಮೇಲೆ ನನ್ನ ಮನಸ್ಸು ದೃಷ್ಟಿಸಲ್ಪಟ್ಟಿರುವಂತೆ ನೋಡಿಕೊಳ್ಳುತ್ತೇನೆ.

- ದೇವರ ವಾಕ್ಯದಲ್ಲಿ ಧ್ಯಾನಿಸುವುದನ್ನು ಕಲಿಯುವುದು.

ದೇವರ ವಾಕ್ಯದಲ್ಲಿ ಧ್ಯಾನಿಸುವುದು ಒಂದು ದೊಡ್ಡ ಒತ್ತಡವನ್ನು ನಿವಾರಿಸುವಂತದ್ದಾಗಿದೆ. ಕೆಲವು ನಿರ್ದಿಷ್ಟ ಕ್ಷೇತ್ರಗಳು ನಿಮಗೆ ತುಂಬಾ ದೊಡ್ಡದಾದ ಒತ್ತಡ ಮತ್ತು ಭಾಗಗಳಿಗೆ ಕಾರಣವಾಗುತ್ತಿದ್ದರೆ ಅಂತಹ ಪರಿಸ್ಥಿತಿಗಳ ಮೇಲೆ ದೇವರ ವಾಕ್ಯವನ್ನು ಧ್ಯಾನಿಸಿರಿ ಮತ್ತು ನೀವು ಅದನ್ನು ಮಾಡುವಾಗ, ಭಯದ ಬದಲಿಗೆ ನಂಬಿಕೆಯೊಡನೆ ಅದು ನಿಮ್ಮನ್ನು ತುಂಬಿಸುತ್ತದೆ, ಭಯವು ಒತ್ತಡವನ್ನು ಉತ್ಪಾದಿಸುತ್ತದೆ, ನಂಬಿಕೆಯು ಭರವಸೆಯನ್ನು ಉತ್ಪಾದಿಸುತ್ತದೆ, ನೀವು ವಿಶ್ರಾಂತವಾಗಿರಲೂ ಸಹಾಯಿಸುತ್ತದೆ ಮತ್ತು ಶಾಂತವಾಗಿರಿಸುತ್ತದೆ.

## ಸ್ಪರ್ಧೆ

- ಆರೋಗ್ಯಕರವಾದ ಸ್ಪರ್ಧೆಯು ಒಂದು ಉತ್ತಮ ವಿಷಯವಾಗಿದೆ.

ನೀವು 100 ಮೀಟರ್ ಓಟವನ್ನು ಓಡುವಾಗ, ನೀವು ಹೊಸದಾಗಿ ಹುಟ್ಟಿದ್ದರು, ಆತ್ಮನಿಂದ ತುಂಬಿಸಲ್ಪಟ್ಟಿದ್ದರು, ಅನ್ಯಭಾಷೆಯಲ್ಲಿ ಮಾತನಾಡಿದರು, ದೆವ್ವ ಓಡಿಸುವ ಕ್ರೈಸ್ತರಾಗಿದ್ದರು ಓಟದ ಸ್ಪರ್ಧೆಯಲ್ಲಿ ಇತರೆ ಸ್ಪರ್ಧಿಗಳ ಕೈಯನ್ನು ಹಿಡಿದುಕೊಂಡು ಓಡುವುದನ್ನು ನೀವು ನಿರೀಕ್ಷಿಸಲು ಸಾಧ್ಯವಿಲ್ಲ! ಪ್ರಾರಂಭದಿಂದ ಮುಗಿಯುವ ಗೆರೆಯವರೆಗೂ ನೀವು ಉತ್ತಮವಾದದ್ದನ್ನು ನೀಡುವುದು ಅವಶ್ಯಕ. ಆರೋಗ್ಯಕರ ಸ್ಪರ್ಧೆಯು ಅದರಿಂದ ಉತ್ತಮವಾದದ್ದನ್ನು ಹೊರತರುತ್ತದೆ. ಅದೇ ರೀತಿಯಲ್ಲಿ ಕೆಲಸದ ಸ್ಥಳದಲ್ಲಿ ಸ್ಪರ್ಧಿಯಾಗಿರುವುದು ಸರಿಯಾದುದಾಗಿದೆ. ಆದರೆ ಸರಿಯಾದ ರೀತಿಯಲ್ಲಿ ಅದನ್ನು ಮಾಡಿರಿ ಮತ್ತು ನಿಮ್ಮ ಬಹುಮಾನಕ್ಕಾಗಿ ದೇವರನ್ನು ನೋಡಿರಿ.

**ಕೊಲೊಸ್ಸೆಯವರಿಗೆ 3:22-24**

**22 ದಾಸತ್ವದಲ್ಲಿರುವವರೇ, ಈ ಲೋಕದಲ್ಲಿನ ನಿಮ್ಮ ಯಜಮಾನರಿಗೆ ಎಲ್ಲಾ ವಿಷಯಗಳಲ್ಲಿ ವಿಧೇಯರಾಗಿರಿ ಮನುಷ್ಯರನ್ನು ಮೆಚ್ಚಿಸುವವರು ಮಾಡುವ ಪ್ರಕಾರ ನಿಮ್ಮ ಯಜಮಾನರು ನೋಡುತ್ತಿರುವಾಗ ಮಾತ್ರ ಸೇವೆ ಮಾಡದೆ ಕರ್ತನಿಗೆ ಭಯಪಡುವವರಾಗಿ ಸರಳ ಮನಸ್ಸಿನಿಂದ ಕೆಲಸ ಮಾಡಿರಿ.**

**23 ನೀವು ಯಾವ ಕೆಲಸವನ್ನು ಮಾಡಿದರೂ ಅದನ್ನು ಮನುಷ್ಯರಿಗೋಸ್ಕರವೆಂದು ಮಾಡದೆ ಕರ್ತನಿಗೋಸ್ಕರವೇ ಎಂದು ಮನಃ ಪೂರ್ವಕವಾಗಿ ಮಾಡಿರಿ**

**24 ಕರ್ತನಿಂದ ಪರಲೋಕ ಬಾಧ್ಯತೆಯೆಂಬ ಪ್ರತಿಫಲವನ್ನು ಹೊಂದುವೆವೆಂದು ತಿಳಿದಿದ್ದೀರಲ್ಲಾ ನೀವು ಕರ್ತನಾದ ಕ್ರಿಸ್ತನಿಗೆ ದಾಸರಾಗಿದ್ದೀರಿ.**

- ಕೆಲಸದ ಸ್ಥಳದಲ್ಲಿ ಪ್ರಾಮಾಣಿಕವಾಗಿ ಮತ್ತು ನೈತಿಕ ವಿಧಾನದಲ್ಲಿ ಸ್ಪರ್ಧೆಮಾಡುವುದರಲ್ಲಿ ತಪ್ಪೇನಿಲ್ಲ. ಪ್ರಾಮಾಣಿಕತೆಯು ಮೇಲುಗೈ ಸಾಧಿಸುತ್ತದೆ!

## ಪುರುಷ ದುರಭಿಮಾನ ಮತ್ತು ಲಿಂಗ ಪಕ್ಷಪಾತಗಳು

ಅನೇಕ ಸಂಘ ಸಂಸ್ಥೆಗಳು ಪುರುಷರನ್ನು ಮಾತ್ರವೇ ಉತ್ತೇಜಿಸುವಂತಹ ಅಲಿಖಿತ ಕಾನೂನು ಹೊಂದಿವೆ. ಅನೇಕ ಸ್ತ್ರೀಯರು ಇಂತಹ ಪಕ್ಷಪಾತವನ್ನು ಅನುಭವಿಸಬಹುದು. ಹಾಗೇಯೇ ಅದೇ ಸ್ಥಾನದಲ್ಲಿರುವ ಪುರುಷರಿಗಿಂತ ಸ್ತ್ರೀಯರಿಗೆ ಹೆಚ್ಚಿನ ಸಂಬಳ ದೊರೆಯುವುದಿಲ್ಲ. ನೀವು ಅಂತಹ ಪರಿಸ್ಥಿತಿಯಲ್ಲಿ ಇದ್ದರೆ ನೀವು ಕಾದಾಡಬೇಡಿರಿ. ಕರ್ತನನ್ನು ಎದುರು ನೋಡಿರಿ ಮತ್ತು ಪದೋನ್ನತಿಯು ದೇವರಿಂದ ಬರುತ್ತದೆಂಬುದನ್ನು ನೆನಸಿಕೊಳ್ಳಿರಿ ಮತ್ತು ನಿಮ್ಮ ಕೈ ಕೆಲಸಗಳನ್ನು ದೇವರು ಸಮೃದ್ಧಿಗೊಳಿಸಲೂ ಶಕ್ತನಾಗಿದ್ದಾನೆ. ನಿಮ್ಮ ಮಾರ್ಗದಿಂದ ಯಾರನ್ನಾದರೂ ಹೇಗೆ ತೆಗೆಯಬೇಕೆಂದು ಆತನಿಗೆ ಗೊತ್ತಿದೆ ಆದ್ದರಿಂದ ನೀವು ಪದೋನ್ನತಿ ಹೊಂದಬಹುದು.

**ಕೀರ್ತನೆಗಳು 75:6,7**

**6 ಯಾಕಂದರೆ ಉದ್ಧಾರವು ಮೂಡಲಿಂದಾಗಲಿ ಪಡುವಣದಿಂದಾಗಲಿ ಅರಣ್ಯದಿಂದಾಗಲಿ ಬರುವುದಿಲ್ಲ**

**7 ದೇವರೇ ನ್ಯಾಯಧೀಶನಾಗಿ ಒಬ್ಬನನ್ನು ತೆಗೆದು ಇನ್ನೊಬ್ಬನನ್ನು ಸ್ಥಾಪಿಸುತ್ತಾನೆ.**

## ಲೈಂಗಿಕ ಪ್ರಗತಿಗಳು

ನಿಮ್ಮ ಮೇಲಾಧಿಕಾರಿಗೆ ನೀವು ಲೈಂಗಿಕ ಒಲವು ತೋರಿಸುವವರೆಗೂ ಯಾವುದೇ ಪದೋನ್ನತಿ ಹೊಂದಲೂ ಅವಕಾಶವಿಲ್ಲದಿರುವಂತಹ ಸ್ಥಿತಿಯಲ್ಲಿ ನಿಮ್ಮನ್ನು ಗುರುತಿಸಿಕೊಂಡಿದ್ದೀರಾ? ಅಂತಹ ಕ್ಷೇತ್ರಗಳಲ್ಲಿ ಒಪ್ಪಿಕೊಳ್ಳಲೂ ಒತ್ತಡಗಳಿದ್ದರೆ, ನೀವು ಗಟ್ಟಿಯಾಗಿ ನಿಂತುಕೊಳ್ಳಿರಿ ಮತ್ತು ''ಇಲ್ಲಾ!'' ಎಂಬುದಾಗಿ ಹೇಳಿರಿ. ಅದಕ್ಕೆ ಶರಣಾಗಬೇಡಿರಿ ಅಥವಾ ರಾಜಿಮಾಡಿಕೊಳ್ಳಬೇಡಿರಿ. ಪವಿತ್ರವಾಗಿ ಇರ್ರಿ, ನಿರ್ಮಲವಾಗಿ ಇರ್ರಿ. ಮದುವೆಯಾಗಿರುವವರು, ಏನೇ ವಿಚಾರವಾದರೂ ಸರಿ ನಿಮ್ಮ ಗಂಡಂದಿರಿಗೆ ನಂಬಿಗಸ್ತರಾಗಿ ಇರ್ರಿ.

- ನಿಮ್ಮ ಕೆಲಸದ ಸ್ಥಳದಲ್ಲಿ ದೇವರು ನಿಮ್ಮ ಸಂರಕ್ಷಕನಾಗಿದ್ದಾನೆ.

**ಕಿರ್ತನೆಗಳು 3:3**
**ಆದರೂ ಯೆಹೋವನೇ ನೀನು ನನ್ನನ್ನು ಕಾಯುವ ಗುರಾಣಿ ನೀನು ನನ್ನ ಗೌರವಕ್ಕೆ ಆಧಾರನೂ ನನ್ನ ತಲೆಯನ್ನು ಎತ್ತುವಂತೆ ಮಾಡುವವನೂ ಆಗಿದ್ದೀ.**

**ಕೀರ್ತನೆಗಳು 27:1**
**ಯೆಹೋವನು ನನಗೆ ಬೆಳಕೂ ರಕ್ಷಕನೂ ಆಗಿದ್ದಾನೆ ನಾನು ಯಾರಿಗೆ ಭಯಪಟ್ಟೇನು? ಯೆಹೋವನು ನನ್ನ ಪ್ರಾಣದ ಆಧಾರವು ನಾನು ಯಾರಿಗೆ ಹೆದರೇನು?**

- ಸೌಮ್ಯತೆಯೊಡನೆ ವಸ್ತ್ರಧರಿಸಿರಿ, ಸೂಚಕ ವಸ್ತ್ರಗಳನ್ನು ಧರಿಸಬೇಡಿರಿ ಮತ್ತು ಸಭ್ಯತೆಯಿಂದ ವರ್ತಿಸಿರಿ.

**ತೀತನಿಗೆ 2:4,5**
**[4] ಇದಲ್ಲದೆ ಅವರು ಪ್ರಾಯದ ಸ್ತ್ರೀಯರಿಗೆ ನಿಮ್ಮ ಮೂಲಕ ದೇವರ ವಾಕ್ಯಕ್ಕೆ ದೂಷಣೆಯಾಗದಂತೆ ನೀವು ಗಂಡಂದಿರನ್ನೂ ಮಕ್ಕಳನ್ನೂ ಪ್ರೀತಿಸುವವರೂ, ದಮೆಯುಳ್ಳವರೂ, ಪತಿವ್ರತೆಯರೂ,**
**[5] ಮನೆಯಲ್ಲೇ ಕೆಲಸಮಾಡುವವರೂ, ಸುಶೀಲೆಯರೂ, ನಿಮ್ಮ ಗಂಡಂದಿರಿಗೆ ಅಧೀನರೂ, ಆಗಿರಬೇಕೆಂದು ಬುದ್ಧಿ ಕಲಿಸುವ ಹಾಗೆ ಬೋಧಿಸು.**

## ಉದ್ಯೋಗದ ಆಯ್ಕೆ

ಕೆಲವು ಸ್ತ್ರೀಯರು ಕಾರ್ಯಕ್ರಮಗಳ ನಿರ್ವಹಣೆ, ಮನರಂಜನೆ, ಸೌಂದರ್ಯ ವಿನ್ಯಾಸ ಮುಂತಾದಂತಹ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅಲ್ಲಿ ಪಾಪವು ಸುತ್ತುವರೆದಿದೆ ಎಂಬುದಾಗಿ ಅಂತಹ ಉದ್ಯೋಗಗಳಿಂದ ನೀವು ದೂರ ಓಡಿಹೋಗಬೇಕಾದ ಅವಶ್ಯಕತೆಯಿಲ್ಲ. ನೀವು ಇಷ್ಟಪಟ್ಟರೂ ಇಲ್ಲದಿದ್ದರೂ ದುರಾತ್ಮನು ಹೆಚ್ಚಾಗಿ ಎಲ್ಲಾ ಕೈಗಾರಿಕೆಗಳು ಮತ್ತು ನಿಗಮಗಳಲ್ಲಿಯೂ ಅಸ್ತಿತ್ವದಲ್ಲಿರುತ್ತಾನೆ. ಯೇಸುವು ನಾವು ಲೋಕದಲ್ಲಿರಬೇಕು ಅದರಿಂದ ಓಡಿಹೋಗಬಾರದೆಂದು ನಮ್ಮನ್ನು ಕೇಳಿಕೊಂಡಿದ್ದಾನೆ ನಿಮ್ಮ ಉದ್ಯೋಗಕ್ಕೂ ಈ ತತ್ವವನ್ನು ಅಳವಡಿಸಿರಿ.

**ಯೋಹಾನ 17: 14-18**
**[14] ನಾನು ನಿನ್ನ ವಾಕ್ಯವನ್ನು ಇವರಿಗೆ ಕೊಟ್ಟಿದ್ದೇನೆ ನಾನು ಲೋಕದವನಲ್ಲದೆ ಇರುವ ಪ್ರಕಾರ ಇವರು ಲೋಕದವರಲ್ಲ ಆದಕಾರಣ ಲೋಕವು ಇವರ ಮೇಲೆ ದ್ವೇಷ ಮಾಡಿ ಅದೆ**
**[15] ಇವರನ್ನು ಲೋಕದೊಳಗಿಂದ ತೆಗೆದುಕೊಂಡು ಹೋಗಬೇಕೆಂದು ನಾನು ಕೇಳಿಕೊಳ್ಳುವುದಿಲ್ಲ ಕೆಡುಕನಿಂದ ತಪ್ಪಿಸಿ ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ.**

**[16] ನಾನು ಲೋಕದವನಲ್ಲದೆ ಇರುವ ಪ್ರಕಾರ ಇವರು ಲೋಕದವರಲ್ಲ**
**[17] ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಟೆಪಡಿಸು ನಿನ್ನ ವಾಕ್ಯವೇ ಸತ್ಯವು**
**[18] ನೀನು ನನ್ನನ್ನು ಲೋಕಕ್ಕೆ ಕಳುಹಿಸಿಕೊಟ್ಟಂತೆ ನಾನೂ ಇವರನ್ನು ಲೋಕಕ್ಕೆ ಕಳುಹಿಸಿಕೊಟ್ಟೆನು.**

ನಿಮ್ಮ ಉದ್ಯೋಗವು ನಿಮ್ಮ ನಂಬಿಕೆ, ನಡವಳಿಕೆ, ನಡತೆ, ಸದ್ಗುಣ ಮತ್ತು ಪ್ರಾಮಾಣಿಕತೆಯ ಮೇಲೆ ರಾಜಿಮಾಡಿಕೊಳ್ಳಲೂ ಒತ್ತಾಯ ಪಡಿಸುತ್ತಿದ್ದರೆ ಆವಾಗ ನಿಮ್ಮನ್ನು ಆ ಸ್ಥಾನದಿಂದ ತೆಗೆದು ಹಾಕಿಸಿಕೊಂಡವರಾಗಿ ಆ ಒಂದು ಉದ್ಯಮದೊಳಗಡೆಯೆ ಮತ್ತೊಂದು ಸ್ಥಾನಕ್ಕೆ ನೀವು ಹೋಗಬೇಕಾಗುತ್ತದೆ. ಒಂದು ವಿಭಿನ್ನತೆಯನ್ನು ಸೃಷ್ಟಿಸಿರಿ. ನಿಮ್ಮ ಸಂಘ ಸಂಸ್ಥೆಯಲ್ಲಿ ಬದಲಾವಣೆ ತರುವ ರಾಯಭಾರಿಯಾಗಿರ್ರಿ.

ಜನರಿರುವ ಕಡೆ ನೀವು ಇರಬೇಕೆಂದು ದೇವರು ಬಯಸುತ್ತಾನೆ ಯಾಕೆಂದರೆ ಅವರೊಡನೆ ಮಾತನಾಡಲೂ ಆತನಿಗೆ ನಿಮ್ಮ ಧ್ವನಿ ಬೇಕು, ಅವರನ್ನು ಮುಟ್ಟಲೂ ನಿಮ್ಮ ಕೈಗಳೂ ಬೇಕು ಮತ್ತು ಅವರಿಗೆ ಪ್ರೀತಿಯನ್ನು ತೋರ್ಪಡಿಸಲೂ ನಿಮ್ಮ ಜೀವಿತಬೇಕು. ಆದ್ದರಿಂದ ಅಲ್ಲಿಯೇ ಉಳಿಯಿರಿ ಮತ್ತು ನೈತಿಕವಾಗಿ ಸವಾಲು ಆಗಿರುವ ಪರಿಸರದಲ್ಲಿ ಒಂದು ವ್ಯತ್ಯಾಸವನ್ನು ಸೃಷ್ಟಿಸಿರಿ ಆದರೂ ಅಂತಹ ಪರಿಸರದ ಪ್ರಭಾವಕ್ಕೆ ನೀವು ಒಳಗಾಗದೇ ಅಂತಹ ಪರಿಸರದಲ್ಲಿ ನೀವು ಪ್ರಭಾವ ಬೀರಲು ಆತ್ಮೀಕವಾಗಿ ಬಲವಾಗಿದ್ದೀರಿ ಎಂಬುದನ್ನು ದೃಢಪಡಿಸಿಕೊಳ್ಳಿರಿ.

## ಪ್ರತಿಬಿಂಬಿಸುವಿಕೆ

1) ಮಹಿಳೆಯಾಗಿ ನಿಮ್ಮ ಕೆಲಸದ ಸ್ಥಳದಲ್ಲಿ ನೀವು ಎದುರಿಸುವ ಸಾಮಾನ್ಯ ಸವಾಲುಗಳನ್ನು ನೀವು ಹೇಗೆ ನಿವಾರಿಸಬಹುದು ಎಂಬುದನ್ನು ನೆನಪಿಸಿಕೊಳ್ಳಿರಿ.

# 4

# ಇಬ್ಬರ–ಆದಾಯದ ಕುಟುಂಬಗಳ ಅಪಾಯಗಳು ಅವುಗಳನ್ನು ಹೇಗೆ ದೂರವಾಗಿರಿಸುವುದು

ಗಂಡ ಮತ್ತು ಹೆಂಡತಿ ಇಬ್ಬರೂ ದುಡಿಯುವಾಗ ಕೆಲವು ಅಪಾಯಗಳು ಅಥವಾ ಕಂದಕಗಳು ಇರುತ್ತವೆ.

**ಕಂದಕಗಳು**

***ಪರಸ್ಪರ ಅವಲಂಬನೆಗೆ ಬದಲಾಗಿ ಸ್ವಾತಂತ್ರ್ಯ ಮತ್ತು ಸ್ವಾವಲಂಬನೆ***

ಯಾವಾಗ ಬಾಳಸಂಗಾತಿಗಳು ತಮ್ಮದೇ ವೈಯಕ್ತಿಕವಾದ ಬ್ಯಾಂಕ್ ಖಾತೆಗಳು, ಕಾರು, ಕ್ರೆಡಿಟ್ ಕಾರ್ಡ್ ಮುಂತಾದವುಗಳನ್ನು ಹೊಂದಿರುವಾಗ ಒಗ್ಗಟ್ಟನ್ನು ನಿರ್ಮಿಸುವ ಬದಲಾಗಿ ಅಧಿಕವಾಗಿ ಅವರು ಸ್ವತಂತ್ರರಾಗಿ ಕಂಡುಬರುತ್ತಾರೆ.

***ಬಾಳ ಸಂಗಾತಿಗಳ ನಡುವೆ ಸ್ಪರ್ಧೆಗಳು***

ವಿದ್ಯಾರ್ಹತೆಯುಳ್ಳ ಬಾಳ ಸಂಗಾತಿಗಳು ತಾವು ಕೆಲಸ ಮಾಡುವಂತಹ ಒಂದೇ ಉದ್ದಿಮೆಯಲ್ಲಿ ಸಂಬಳಗಳು ಮತ್ತು ಹೊಂದಿದಂತಹ ಸ್ಥಾನಗಳಲ್ಲಿ ಒಬ್ಬರಿಗೊಬ್ಬರು ಹೋಲಿಸಿಕೊಳ್ಳಲೂ ಮತ್ತು ಸ್ಪರ್ಧಿಸಲೂ ಪ್ರಾರಂಭಿಸುತ್ತಾರೆ.

***ಕೆಲಸದ ಸ್ಥಳವನ್ನೇ ಮದುವೆಯಾದವರಂತೆ ಕಂಡು ಬರುತ್ತಾರೆ***

ಕೆಲವು ಸಂಗಾತಿಗಳು ಬಲಿಪೀಠದ ಬಳಿಯಲ್ಲಿ ''ನಾನು ಮಾಡುತ್ತೇನೆ'' ಎಂದು ಹೇಳುತ್ತಾರೆ. ಮರುದಿನ ಕೆಲಸದ ಸ್ಥಳಕ್ಕೆ ಹೋಗುತ್ತಾರೆ ಮತ್ತು ''ನಾನು ಮಾಡುತ್ತೇನೆ'' ಎಂದು ಹೇಳುತ್ತಾರೆ. ಅವರ ಎಲ್ಲಾ ಸಮಯವನ್ನು ಅವರ ಕೆಲಸದ ಸ್ಥಳದಲ್ಲಿ ಕಳೆಯುತ್ತಾರೆ ಮತ್ತು ಅವರ ಕೆಲಸ ಸ್ಥಳಗಳಿಗೆ ಮದುವೆ ಮಾಡಿಕೊಂಡವರಂತೆ ಕಂಡುಬರುತ್ತಾರೆ!

### *ಅಧಿಕ ಹಣ ಆದರೆ ಕಡಿಮೆ ಸಮಯ*

ನಿಮಗೆ ಅಧಿಕವಾಗಿ ಹಣ ಬೇಕಾ ಅಥವಾ ಒಗ್ಗಟ್ಟಾಗಿ, ಪ್ರಮುಖವಾದ ಸಂಗತಿಗಳನ್ನು ಮಾಡಲೂ ಸಮಯ ಬೇಕಾ? ಈ ಹಂತದಲ್ಲಿ ಸಂಗಾತಿಗಳು ಆಯ್ಕೆಯನ್ನು ಮಾಡಬೇಕು. ಹಣವು ಖರೀದಿಸಲಾಗದಂತಹ ಕೆಲವು ವಿಷಯಗಳಿವೆ. ಅದ್ಭುತಕರವಾಗಿ ಬಾಳ ಸಂಗಾತಿ ಅಥವಾ ಉತ್ತಮವಾದ ಮಕ್ಕಳನ್ನು ಹಣವು ನಮಗೆ ಖರೀದಿಸುವುದಿಲ್ಲ. ಒಂದು ಒಳ್ಳೆಯ ಮದುವೆಯು ಒಟ್ಟಾಗಿ ಸಮಯ ಕಳೆಯುವುದರಿಂದ ಕಟ್ಟಲ್ಪಟ್ಟಿದೆ. ಒಳ್ಳೆಯ ಮಕ್ಕಳು ಬೋಧಿಸಲ್ಪಡುತ್ತಾರೆ, ಎಬ್ಬಿಸಲ್ಪಡುತ್ತಾರೆ ಮತ್ತು ತರಬೇತಿ ಹೊಂದುತ್ತಾರೆ.

### *ಅತಿಯಾದ ಕೆಲಸ ಮಾಡುವ ಸ್ತ್ರೀಯರು*

ಇಬ್ಬರ-ಆದಾಯದ ಕುಟುಂಬದಲ್ಲಿ, ಸ್ತ್ರೀಯರ ಮನೆಯ ಒಳಗಡೆ ಮತ್ತು ಹೊರಗಡೆ ಎರಡು ಕಡೆಯಲ್ಲಿ ಕೆಲಸಮಾಡುವುದು ಸಾಧ್ಯಕರವಾಗುತ್ತದೆ. ಅದು ಅಂತಿಮವಾಗಿ ಅತಿಯಾದ ಕೆಲಸ ಮತ್ತು ಭಸ್ಮವಾಗುವ ಕಡೆಗೆ ನಡೆಸುತ್ತದೆ. ಗಂಡ ಮತ್ತು ಹೆಂಡತಿ ಇಬ್ಬರ ದುಡಿಮೆಯ ಸ್ಥಳದಲ್ಲಿ ತೊಡಗಿಸಿಕೊಂಡಾಗ ಗಂಡನು ಸಹ ಮನೆಯ ಜವಾಬ್ದಾರಿಗಳ ಹೊರೆಯನ್ನು ಗಮನಾರ್ಹವಾಗಿ ಹೊತ್ತುಕೊಂಡರೆ ಅವನ ಹೆಂಡತಿಯು ಅತಿಯಾಗಿ ಕೆಲಸ ಮಾಡುವುದಿಲ್ಲ.

## ಇಬ್ಬರ-ಆದಾಯದ ಕುಟುಂಬಗಳಿಗಾಗಿ ಕ್ರಿಯೆಯ ಹೆಜ್ಜೆಗಳು

### *ಸತ್ಯವಾದ ಮೌಲ್ಯವನ್ನು ತಿಳಿದುಕೊಳ್ಳಿರಿ*

ನೀವು ಇಡೀ ಲೋಕವನ್ನು ಸಂಪಾದಿಸಿಕೊಂಡು ನಿಮ್ಮ ಮನೆಯನ್ನು ಕುಟುಂಬವನ್ನು ಮತ್ತು ಮಕ್ಕಳನ್ನು ಕಳೆದುಕೊಂಡರೆ ನೀವು ಸತ್ಯವಾದ ಮೌಲ್ಯವನ್ನು ಕಳೆದುಕೊಳ್ಳುತ್ತೀರಿ. ನಮ್ಮ ಪ್ರಸ್ತುತ ದಿನಮಾನದ ಹೆಚ್ಚಿನ ಮೆಚ್ಚಿಕೊಂಡ ಉದ್ದಿಮೆಗಾರರು, ವಿವಾಹ ವಿಚ್ಛೇದನೆಗಳು, ಎರಡನೆ ಮತ್ತು ಮೂರನೇ ಮದುವೆ ಆಗಿರುವ ಜನರಾಗಿದ್ದಾರೆ. ಅವರು ರೂಪಾಂತರಗೊಂಡ ಕೈಗಾರಿಕೋದ್ಯಮ ಹೊಂದಿರಬಹುದು, ದೊಡ್ಡ ನಿಗಮಗಳನ್ನು ಕಟ್ಟಿರಬಹುದು ಮತ್ತು ವಿಶ್ವ ಪ್ರಸಿದ್ಧರಾಗಿರಬಹುದು ಆದರೆ ಅವರ ಕುಟುಂಬಗಳು ಮುರಿದುಹೋಗಿವೆ. ಮದುವೆ ಎಂಬುದಾಗಿ ಕರೆಯುವ ಒಬ್ಬಳೇ ಹೆಂಡತಿಯನ್ನು ಹೊಂದಿರುವಂತಹ ಒಂದು ''ಸಂಘ ಸಂಸ್ಥೆಯನ್ನು'' ನಿಭಾಯಿಸಲೂ ಏಕೆ ಸಾಧ್ಯವಾಗುತ್ತಿಲ್ಲ ಎಂಬುದಾಗಿ ಆಶ್ಚರ್ಯಪಡುವ ಪ್ರವೃತ್ತಿ ಹೊಂದಿದ್ದಾರೆ! ಅವರು ಮನೆಗಳನ್ನು

ನಿರ್ವಹಿಸಲು ಸಾಧ್ಯಕರವಾಗದೇ ಇರುವುದು ಬಹಳ ದುಃಖಕರವಾಗಿದೆ. ಪ್ರಪಂಚದ ಪ್ರಸಿದ್ಧಿಯಾಗಿರುವುದಕ್ಕಿಂತ ಬದಲಾಗಿ ದೈವಿಕ ಮಕ್ಕಳು ಮತ್ತು ಅದ್ಭುತಕರವಾದ ಮದುವೆ ಆಧಿಕವಾದ ಮೌಲ್ಯವುಳ್ಳದ್ದನ್ನು ಆರಿಸಿಕೊಳ್ಳುವುದು ನಮಗೆ ಅಗತ್ಯವಾಗಿದೆ.

## *ಸಮಯದ ಸಮತೋಲನ ಮಾಡಲೂ ಪ್ರಜ್ಞೆಯುಳ್ಳ ಪ್ರಯತ್ನ ಮಾಡಿರಿ*

ಸವಾಲುಗಳು ಮತ್ತು ಒತ್ತಡಗಳು ಬಹಳ ದೊಡ್ಡದಾಗಿರುವಾಗಲೂ, ದೇವರೊಂದಿಗೆ ಸಮಯ, ಮನೆಯಲ್ಲಿ ಸಮಯ, ದೇವರ ಮನೆಯಲ್ಲಿ ಸಮಯ ಮತ್ತು ಕೆಲಸದ ಸಮಯವನ್ನು ಸೂಕ್ತವಾಗಿ ಚೈತನ್ಯಗೊಳಿಸಬೇಕು ಮತ್ತು ನಮ್ಮ ಸಮಯವನ್ನು ವಿತರಿಸಲು ನಿರಂತರ ಪ್ರಯತ್ನ ಮಾಡಬೇಕು ಮತ್ತು ಒಂದು ಪ್ರಜ್ಞೆಯುಳ್ಳವರಾಗಿರುವುದು ಅಗತ್ಯವಾಗಿದೆ. ಏಮಿಯವರು ನನಗೆ ಇದರ ಕುರಿತು ನಿರಂತರವಾಗಿ ನೆನಪಿಸುತ್ತಾರೆ ಮತ್ತು ಇದನ್ನು ಯಾವಾಗಲೂ ನಾನು ಪರೀಕ್ಷಿಸಿ ಕೊಳ್ಳುತ್ತಿರುತ್ತೇನೆ.

## *ಇಬ್ಬರ ಬಲವನ್ನು ಬೆಳೆಸಿಕೊಳ್ಳಬೇಕು*

**ಪ್ರಸಂಗಿ 4:9-12**

**9 ಒಬ್ಬನಿಗಿಂತ ಇಬ್ಬರು ಲೇಸು ಅವರ ಪ್ರಯಾಸಕ್ಕೆ ಒಳ್ಳೆಯ ಲಾಭ**

**10 ಒಬ್ಬನು ಬಿದ್ದರೆ ಇನ್ನೊಬ್ಬನು ಎತ್ತುವನು ಬಿದ್ದಾಗ ಎತ್ತುವವನು ಇನ್ನೊಬ್ಬನಿಲ್ಲದಿದ್ದರೆ ಅವನ ಗತಿ ದುರ್ಗತಿಯೇ**

**11 ಮತ್ತು ಒಬ್ಬನ ಮಗ್ಗುಲಲ್ಲೊಬ್ಬನು ಮಲಗಿಕೊಂಡರೆ ಇಬ್ಬರಿಗೂ ಬೆಚ್ಚಗಾಗುವುದು ಒಂಟಿಗನಿಗೆ ಹೇಗೆ ಬೆಚ್ಚಗಾದೀತು**

**12 ಒಬ್ಬಂಟಿಗನನ್ನು ಜಯಿಸಬಲ್ಲವನಿಗೆ ಇಬ್ಬರು ಎದುರಾಗಿ ನಿಲ್ಲಬಹುದು ಮೂರು ಹುರಿಯ ಹಗ್ಗ ಬೇಗ ಕಿತ್ತು ಹೋಗುವುದಿಲ್ಲವಷ್ಟೆ.**

ಇಬ್ಬರ ಬಲವಿರುವಾಗ, ಅಲ್ಲಿ ಎರಡರಷ್ಟು ಬಲವಿರುತ್ತದೆ ಮತ್ತು ನಾವು ಎರಡರಷ್ಟು ಅಧಿಕವಾಗಿ ಸಾಧಿಸಲೂ ಶಕ್ತರಾಗುತ್ತೇವೆ. ಬಾಳ ಸಂಗಾತಿಗಳು ಎಲ್ಲಾ ಕ್ಷೇತ್ರಗಳಲ್ಲಿ ಒಗ್ಗಟ್ಟಾಗಿ ಸೇರಿ ಬಂದರೆ ಅತ್ಯಧಿಕವಾದದ್ದನ್ನು ಒಟ್ಟಾಗಿ ಸಾಧಿಸಬಹುದು ಮತ್ತು ಒಬ್ಬರೇ ಹೋಗುವುದಕ್ಕೆ ಪ್ರತಿಯೊಬ್ಬರೂ ಪ್ರಯತ್ನಿಸುವುದಕ್ಕಿಂತ ಇನ್ನೂ ಉನ್ನತವಾಗಿ, ಮುಂದೆ ಮತ್ತು ಇನ್ನೂ ಗಟ್ಟಿಯಾಗಿ ತಳ್ಳಬಹುದು. ಗಂಡಂದಿರು ಸಹ ವಿಶೇಷವಾಗಿ ಹೆಂಡತಿಯ ಹೊರಗಡೆ ಉದ್ಯೋಗಸ್ಥರಾಗಿರುವಾಗ ಮನೆಯಲ್ಲಿ ಅವರ ಕರ್ತವ್ಯಗಳನ್ನು ನೆರವೇರಿಸುವುದನ್ನು ಕಲಿಯಬೇಕು.

ನಮ್ಮ ಸ್ವಂತ ಜೀವಿತದಲ್ಲಿ, ಏಮಿಯು ಒಬ್ಬ ವೈದ್ಯಕೀಯ ವೈದ್ಯರಾಗಿ ತರಬೇತಿ ಹೊಂದಿದ್ದಾಗಲೂ ಮತ್ತು ಆಕೆಯು ತನ್ನ ಸ್ನಾತಕೋತ್ತರ ಪದವಿಯನ್ನು ಮುಂದುವರೆಸುತ್ತಿದ್ದಾಗ, ನಮ್ಮ ಮಕ್ಕಳು ಸಾಕಷ್ಟು ಬೆಳೆಯುವವರೆಗೂ ಆಕೆಯ ತನ್ನ ವೃತ್ತಿ ಜೀವನವನ್ನು ತಡೆಹಿಡಿಯಲು ಆಕೆಯು ಉದ್ದೇಶ ಪೂರ್ವಕ ಆಯ್ಕೆ ಮಾಡಿದ್ದರು. ಅದು ಸುಲಭವಾದುದಲ್ಲ, ವಾಸ್ತವವಾಗಿ ಕೆಲವು ಸಮಯಗಳಲ್ಲಿ ಬಹಳ ನೋವುಳ್ಳದ್ದಾಗಿತ್ತು. ಹೇಗಾದರೂ ಈಗ ನನ್ನ ಮಕ್ಕಳು ಪೂರ್ಣ ದಿನದ ಶಾಲೆಯಲ್ಲಿದ್ದಾರೆ, ಏಮಿಯು ತನ್ನ ಭಾಗದ ಕಾರ್ಯವನ್ನು ಮಾಡಿದ್ದೇನೆಂಬ ಮತ್ತು ಆಕೆಯನ್ನು ಮಕ್ಕಳು ಅಪೇಕ್ಷಿಸಿದ್ದಂತಹ ಸಮಯದಲ್ಲಿ ಮಕ್ಕಳಿಗಾಗಿ ತ್ಯಾಗ ಮಾಡಿದ್ದೆನೆಂಬ ಸಂಪೂರ್ಣ ಭರವಸೆಯೊಡನೆ ಕೆಲಸದ ಸ್ಥಳಕ್ಕೆ ಕ್ರಮೇಣವಾಗಿ ಹೆಜ್ಜೆಯನ್ನಿಟ್ಟರು.

## ಪ್ರತಿಬಿಂಬಿಸುವಿಕೆ

1) ಉಭಯ ಆದಾಯದ ಕುಟುಂಬಗಳು ಎದುರಿಸುತ್ತಿರುವ ಸಾಮಾನ್ಯ ಮೋಸಗಳನ್ನು ತಪ್ಪಿಸಲು ಸಹಾಯ ಮಾಡಲು ನೀವು ತೆಗೆದುಕೊಳ್ಳಬಹುದಾದ ಹೆಜ್ಜೆಗಳೇನು?

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು. ಆತನು ಪಾಪರಹಿತ ಜೀವನ ನಡೆಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ–ಯೇಸು ಭೂಲೋಕದಲ್ಲಿ ಅನೇಕ ಅದ್ಬುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ 5000 ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು, ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಕಾರ್ಯಗಳು, ದೇವರು ಒಳ್ಳೆಯ ದೇವರಾಗಿದ್ದಾನೆ, ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಆತನು ಬಯಸುತ್ತಾನೆ. ಆತನು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ನಮಗೆ ಪ್ರಕಟಿಸುತ್ತಾನೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಸರಿ ಕಾಣದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಸುತ್ತದೆ ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ***''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ''*** ಎಂದು ಹೇಳುತ್ತದೆ **(ರೋಮಾಪುರದವರಿಗೆ 6:23).** ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಜೀವದಿಂದ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ ಮತ್ತು ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ. ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ

ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ—ನೀನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

***''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''*** **(ಅಪೊಸ್ತಲರ ಕೃತ್ಯಗಳು 10:43).**

***''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವುದು ಎಂಬುದು''*** **(ರೋಮಾಪುರದವರಿಗೆ 10:9).**

ನೀವು ಸಹ ಯೇಸು ಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪಾಪ ಪರಿಹಾರಗಳನ್ನು ಹೊಂದಿಕೊಳ್ಳಬಹುದು.

*ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.*

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ, ನನ್ನ ಬಾಯಿಂದ ನೀನು ನನಗಾಗಿ ಮರಣವನ್ನು ಹೊಂದಿದೆ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ, ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು. ಆಮೆನ್*

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರಕ್ಕೆ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ಆಲ್ ಪೀಪಲ್ಸ್ ಸಭೆಯು **ಯೇಸು ಕಿಸ್ತನನ್ನು ಪ್ರೀತಿಸುವ, ವಾಕ್ಯದ ಮೇಲೆ ಕೇಂದ್ರಿಕರಿಸಲ್ಪಟ್ಟ, ಆತ್ಮನಿಂದ ತುಂಬಿಸಲ್ಪಟ್ಟ,** ಒಂದು ಸಜ್ಜುಗೊಳಿಸುವ ಕೇಂದ್ರ, ಸೇವಾ ತಳಹದಿಯ ಮತ್ತು ದೇಶಗಳನ್ನು ಸಂಧಿಸುವ ಒಂದು ಕುಟುಂಬ ಸಭೆಯಾಗಿದೆ.

- **ಕುಟುಂಬ ಸಭೆಯಾಗಿ,** ನಾವು ಕ್ರಿಸ್ತನ ಕೇಂದ್ರಿತ ಸಹಭಾಗಿತ್ವ, ದೇವರ ಸಭೆಯಂತೆ ನಾವು ಒಬ್ಬರಿಗೊಬ್ಬರು ಪ್ರೀತಿಯಲ್ಲಿ ಪರಸ್ಪರ ಕಾಳಜಿ ಮತ್ತು ಸೇವೆ ಮಾಡುವಂತಹ ಒಂದು ಸಮುದಾಯವಾಗಿ ಒಟ್ಟಿಗೆ ಬೆಳೆಯುತ್ತೇವೆ.
- **ಒಂದು ಸಜ್ಜುಗೊಳಿಸುವ ಕೇಂದ್ರವಾಗಿ,** ನಾವು ಪ್ರತಿ ವಿಶ್ವಾಸಿಯು ವಿಜಯಶಾಲಿಯಾಗಿ ಜೀವಿಸಲು, ಕ್ರಿಸ್ತನಂತೆ ಪ್ರಬುದ್ಧರಾಗಿ ಮತ್ತು ಅವರ ಜೀವಿತಗಳಿಗಾಗಿ ದೇವರ ಉದ್ದೇಶಗಳನ್ನು ನೆರವೇರಿಸಲು ಸಜ್ಜುಗೊಳಿಸುತ್ತೇವೆ ಮತ್ತು ಅಧಿಕಾರ ನೀಡುತ್ತೇವೆ.
- **ಒಂದು ಸೇವಾ ನೆಲೆಯಾಗಿ,** ದೇವರ ವಾಕ್ಯದ ಮೂಲಕವಾಗಿ ಯೇಸುಕ್ರಿಸ್ತನ ಸಂಪೂರ್ಣ ಸುವಾರ್ತೆಯೊಂದಿಗೆ ಮತ್ತು ಪವಿತ್ರಾತ್ಮದ ಬಲದ ಅಪ್ರಾಕೃತ ತೋರ್ಪಡಿಸುವಿಕೆಗಳೊಡನೆ ನಮ್ಮ ನಗರ, ದೇಶ ಮತ್ತು ದೇಶಗಳನ್ನು ಆಶೀರ್ವದಿಸಲು ಅರ್ಥಪೂರ್ಣ ಸೇವೆಯಲ್ಲಿ ನಾವು ತೊಡಗುತ್ತೇವೆ.
- **ಪ್ರಪಂಚವನ್ನು ಸಂಧಿಸುವವರಾಗಿ,** ದೇವರ ರಾಜ್ಯಕ್ಕಾಗಿ ತಮ್ಮ ಪ್ರದೇಶಗಳ ಮೇಲೆ ಪ್ರಭಾವ ಬೀರುವ ದೈವಿಕ ನಾಯಕರು ಮತ್ತು ಆತ್ಮಭರಿತ ಸಭೆಗಳನ್ನು ಪೋಷಿಸುವುದರಿಂದ ಸ್ಥಳೀಯವಾಗಿ ಮತ್ತು ಜಾಗತಿಕವಾಗಿ ನಾವು ಸೇವೆ ಸಲ್ಲಿಸುತ್ತೇವೆ.

ಆಲ್ ಪೀಪಲ್ಸ್ ಸಭೆಯಲ್ಲಿನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ದತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕ ಕಾರ್ಯ, ಅದ್ಭುತಕಾರ್ಯ, ಮಹಾತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ (1 ಕೊರಿಂಥದವರಿಗೆ 2:4,5; ಇಬ್ರಿಯರಿಗೆ 2:3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆಯು ನಮ್ಮ ಗುರಿಯಾಗಿದೆ.

ಬೆಂಗಳೂರಿನ ಆಲ್ ಪೀಪಲ್ಸ್ ಸಭೆಯ ಮುಖ್ಯ ನೆಲೆಯೊಡನೆ ಭಾರತದಲ್ಲಿ ಅನೇಕ ಇತರ ಸಭೆಗಳನ್ನು ಹೊಂದಿದೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್ ನ್ನು ಸಂಪರ್ಕಿರಿ. **apcwo.org/locations** ಅಥವಾ **contact@apcwo.org** ಗೆ ಇ-ಮೇಲ್ ಕಳುಹಿಸಿರಿ.

# ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

A Church in Revival
A Real Place Called Heaven
A Time for Every Purpose
Ancient Landmarks
Baptism in the Holy Spirit
Being Spiritually Minded and Earthly Wise
Biblical Attitude Towards Work
Breaking Personal and Generational Bondages
Change
Code of Honor
Divine Favor
Divine Order in the Citywide Church
Don't Compromise Your Calling
Don't Lose Hope
Equipping the Saints
Foundations (Track 1)
Fulfilling God's Purpose for Your Life
Gifts of the Holy Spirit
Giving Birth to the Purposes of God
God Is a Good God
God's Word—The Miracle Seed
How to Help Your Pastor
Integrity
Kingdom Builders
Laying the Axe to the Root
Living Life Without Strife
Marriage and Family
Ministering Healing and Deliverance
Offenses—Don't Take Them
Open Heavens
Our Redemption
Receiving God's Guidance
Revivals, Visitations and Moves of God
Shhh! No Gossip!
Speak Your Faith
The Conquest of the Mind
The Father's Love
The House of God
The Kingdom of God
The Mighty Name of Jesus
The Night Seasons of Life
The Power of Commitment
The Presence of God
The Redemptive Heart of God
The Refiner's Fire
The Spirit of Wisdom, Revelation and Power
The Wonderful Benefits of Speaking in Tongues
Timeless Principles for the Workplace
Understanding the Prophetic
Water Baptism
We Are Different
Who We Are in Christ
Women in the Workplace
Work Its Original Design

ಹೊಸ ಪುಸ್ತಕಗಳು ನಿಯಮಿತವಾಗಿ ಬಿಡುಗಡೆಗೊಳ್ಳುತ್ತವೆ. ಆಲ್ ಪೀಪಲ್ಸ್ ಸಭೆಯ ಕ್ರಿಸ್ತೀಯ ಉಚಿತ ಪುಸ್ತಕಗಳನ್ನು ಪಿ.ಡಿ.ಎಫ್ ನಲ್ಲಿ, ಆಡಿಯೋ ಮತ್ತು ಇತರ ಸ್ವರೂಪಗಳಲ್ಲಿ ಡೌನ್ಲೋಡ್ ಮಾಡಲು ದಯವಿಟ್ಟು **apcwo.org/books** ನಿಂದ ಸಂಗ್ರಹಿಸಿರಿ.ಇವುಗಳಲ್ಲಿ ಅನೇಕ ಪುಸ್ತಕಗಳು ಇತರ ಭಾಷೆಗಳಲ್ಲೂ ಸಹ ದೊರೆಯುತ್ತವೆ. ಉಚಿತ ಆಡಿಯೋ ಮತ್ತು ವಿಡಿಯೋ ಸಂದೇಶಗಳು, ಪ್ರಸಂಗ ಟಿಪ್ಪಣಿಗಳು ಮತ್ತು ಇತರ ಉಚಿತ ಅಧ್ಯಯನ ಸಂಗ್ರಹಗಳಿಗಾಗಿ ದಯವಿಟ್ಟು **apcwo.org/sermons** ನ್ನು ಸಂಪರ್ಕಿಸಿರಿ.

# ಕ್ರಿಸಾಲಿಸ್ ಕೌನ್ಸೆಲಿಂಗ್(ಸಲಹೆ)

ಕ್ರಿಸಾಲಿಸ್ ಕೌನ್ಸೆಲಿಂಗ್ ಜನರು ಜೀವನದ ಸವಾಲುಗಳನ್ನು ಎದುರಿಸಲು ಮತ್ತು ಜಯಿಸಿ ಹೊರಬರಲು ಸಹಾಯ ಮಾಡಲು ವೈಯಕ್ತಿಕ ಸಲಹೆಯನ್ನು ನೀಡುತ್ತದೆ. ಕ್ರಿಸಾಲಿಸ್ ಕೌನ್ಸೆಲಿಂಗ್ ತರಬೇತಿ ಪಡೆದ ವೃತ್ತಿಪರ ಮತ್ತು ಅನುಭವಿ ಕ್ರೈಸ್ತೀಯ ಸಲಹೆಗಾರರ ತಂಡವಾಗಿದೆ.

ನಮ್ಮ ಸೇವೆಗಳು ಎಲ್ಲಾ ವಯೋಮಾನದವರಿಗೆ ಮತ್ತು ವಿಶಾಲ ವ್ಯಾಪ್ತಿಯ ಜೀವನದ ಸವಾಲುಗಳ ಕುರಿತು ಸಂಬೋಧಿಸುವುದಾಗಿದೆ.

**ಹದಿಹರೆಯದವರು**
**ವೈಯಕ್ತಿಕ ಹೊಂದಾಣಿಕೆಗಳು**
**ಸಂಬಂಧಿತ ಸವಾಲುಗಳು**
**ಶೈಕ್ಷಣಿಕ ಕಡಿಮೆ ಸಾಧನೆ**
**ಕೆಲಸಕ್ಕೆ ಸಂಬಂಧಿಸಿದ ಸಮಸ್ಯೆಗಳು**
**ಕುಟುಂಬ / ದಂಪತಿಗಳು: ವಿವಾಹಪೂರ್ವ, ವೈವಾಹಿಕ**
**ಪೋಷಕರು / ಮಕ್ಕಳು / ಒಡಹುಟ್ಟಿದವರು / ಗೆಳೆಯರು**
**ವರ್ತನೆಯ ಅಸ್ತವ್ಯಸ್ತತೆಗಳು**
**ವ್ಯಕ್ತಿತ್ವ ಅಸ್ತವ್ಯಸ್ತತೆಗಳು**
**ಮಾನಸಿಕ / ಭಾವನಾತ್ಮಕ ಸಮಸ್ಯೆಗಳು**
**ಒತ್ತಡ / ಆಘಾತ**
**ಮಧುಪಾನ/ ಮಾದಕ ವಸ್ತು ದುರುಪಯೋಗ**
**ಆತ್ಮೀಕ ಸಮಸ್ಯೆಗಳು**
**ಜೀವನ ತರಬೇತಿ**

ಕ್ರಿಸಾಲಿಸ್ ಕೌನ್ಸೆಲಿಂಗ್ ಸೇವೆಗಳು ಕೈಗೆಟುಕುವ ಶುಲ್ಕಗಳು ಮತ್ತು ಸುಲಭವಾಗಿ ಪಡೆದುಕೊಳ್ಳಬಹುದಾಗಿದೆ.

ನಮ್ಮ ತರಬೇತಿ ಪಡೆದ ಸಲಹೆಗಾರರೊಂದಿಗೆ ನಿಮ್ಮ ನೇಮಕಾತಿಯನ್ನು ನಿಗದಿಪಡಿಸಲು:

**ವೆಬ್ಸೈಟ್: chrysalislife.org**
**ದೂರವಾಣಿ**: +91-80-25452617 ಟೋಲ್-ಫ್ರೀ (ಭಾರತದೊಳಗೆ) 1-800-300-00998
**ಇಮೇಲ್: counselor@chrysalislife.org**

ಕ್ರಿಸಾಲಿಸ್ ಸಲಹಾಸೇವೆಯು ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್‌ನ ಒಂದು ಸೇವೆಯಾಗಿದೆ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು, (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತಿಗೊಳಿಸುವುದು, (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತ ದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾ ಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆಯುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ ನಮ್ಮ ಕಛೇರಿಯ ವಿಳಾಸವಾದ ''ಆಲ್ ಪೀಪಲ್ಸ್ ಸಭೆ'' ಬೆಂಗಳೂರು ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು.

**Account Name:** All Peoples Church
**Account Number:** 50200068829058
**IFSC Code:** HDFC0004367
**Bank:** HDFC Bank, 7M/308 80 Ft Road, HRBR Layout, Kalyan Nagar, Bengaluru, 560043, Karnataka

***ದಯವಿಟ್ಟು ಗಮನಿಸಿ:*** *ಆಲ್ ಪೀಪಲ್ಸ್ ಸಭೆಯು ಭಾರತ ದೇಶದಲ್ಲಿ ಬ್ಯಾಂಕ್ ಖಾತೆ ಹೊಂದಿರುವವರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು. ಹೆಚ್ಚುವರಿ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿ:* **apcwo.org/give.**

ಹಾಗೆಯೇ ನಿಮಗೆ ಸಾಧ್ಯವಾಗುವಾಗಲೆಲ್ಲಾ ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ!

**ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!**


## DOWNLOAD THE FREE APP!

*Search for*

"All Peoples Church Bangalore"
in the App or Google play stores.

Available on the App Store

ANDROID APP ON Google play







*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

**ಆಲ್ ಪೀಪಲ್ಸ್ ಚರ್ಚ್ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ**

**apcbiblecollege.org**

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು (APC–BC) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು–ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿವುದನ್ನು ನಾವು ನಂಬುತ್ತೇವೆ.

ಏ.ಪಿ.ಸಿ–ಬಿ.ಸಿ.ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳು ನೀಡುತ್ತೇವೆ.

- ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (C.Th.)
- ಎರಡು ವರ್ಷದ ಡಿಪ್ಲೋಮ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (D.Th.)
- ಮೂರು ವರ್ಷದ ಬ್ಯಾಚುಲರ್ಸ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಷ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ **ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 9 ರಿಂದ ಮದ್ಯಾಹ್ನ 1ರವರೆಗೆ ಜರುಗುತ್ತದೆ.ಭಾರತದ ಕಾಲಾಮಾನ (ಸಂಘಟಿತ ಸಾರ್ವತ್ರಿಕ ಸಮಯ+5:30).** ನಾವು ಇತರೆ ಮೂರು ಕಲಿಕಾ ಐಚ್ಚಿಕ ವಿಷಯಗಳನ್ನು ನೀಡುತ್ತೇವೆ.

- **ಆನ್–ಕ್ಯಾಂಪಸ್:** ಅಧ್ಯಯನ ಆವರಣದಲ್ಲಿ ವೈಯಕ್ತಿಕ ತರಗತಿಗಳಿಗೆ ಹಾಜರಾಗುವುದು.
- **ಆನ್ ಲೈನ್:** ಆನ್ಲೈನ್ ನ ನೇರ ಉಪನ್ಯಾಸಗಳಿಗೆ ಹಾಜರಾಗುವುದು.
- **ಇ–ಕಲಿಕೆ:** ಆನ್ಲೈನ್ ಪೋರ್ಟಲ್ ಆದ **apcbiblecollege.org/elearn** ನ ಮೂಲಕ ಸ್ವಯಂ ಚಾಲಿತವಾಗಿ ಕಲಿಯುವುದು.

ಆನ್ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಮತ್ತು ಕಾಲೇಜು ಪಠ್ಯಕ್ರಮ, ಅರ್ಹತಾ ಮಾನದಂಡ, ಬೋಧನಾ ವೆಚ್ಚಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ನಮೂನೆಯನ್ನು ಡೌನ್ಲೋಡ್ ಮಾಡಲು ದಯವಿಟ್ಟು **apcbiblecollege.org** ಯನ್ನು ಸಂಪರ್ಕಿಸಿರಿ.

ಸ್ತ್ರೀಯರು ಕೆಲಸದ ಸ್ಥಳದಲ್ಲಿ ದುಡಿಯುವುದು ಸರಿಯೇ? ಇವರ ಕುರಿತು ಜನರು ವಿವಿಧ ಅಭಿಪ್ರಾಯಗಳನ್ನು ಹೊಂದಿದ್ದಾರೆ. ಕೆಲವರು ‘ಹೌದು’ ಅನ್ನುತ್ತಾರೆ ಹಾಗೆಯೇ ಇತರರು ’ಇಲ್ಲ ಎಂಬುದಾಗಿ ಹೇಳುತ್ತಾರೆ. ಸ್ತ್ರೀಯರು ಮನೆಯಲ್ಲೇ ಇರಬೇಕು ಮತ್ತು ಹೊರಗಡೆ ಹೆಜ್ಜೆಯನ್ನಿಡಬಾರದು. ಆದರೆ ಇದರ ಕುರಿತು ಸತ್ಯವೇದಕ್ಕನುಸಾರವಾದ ದೃಷ್ಟಿಕೋನವನ್ನು ನಾವು ಪಡೆಯೋಣ.

ಸ್ತ್ರೀಯರ ಪ್ರಾಥಮಿಕ ಕರೆಯು ಆಕೆಯ ಗಂಡನಿಗೆ ಹೆಂಡತಿಯಾಗಿರುವುದು, ಆಕೆಯ ಮಕ್ಕಳಿಗೆ ತಾಯಿಯಾಗಿರುವುದು ಮತ್ತು ಮನೆಯ ಯಜಮಾನಿಯಾಗಿರುವುದಾಗಿದೆ ಎಂಬುದಾಗಿ ದೇವರು ಹೇಳಿದ್ದಾನೆ. ಆದರೆ ಸ್ತ್ರೀಯರು ವ್ಯಾಪಾರದಲ್ಲಿ ತೊಡಗಿಸಿಕೊಳ್ಳಬಾರದೆಂಬುದಾಗಿ ಆತನು ಹೇಳಿಲ್ಲ. ಆದ್ದರಿಂದ ವಚನ ಭಾಗಗಳನ್ನು ತಪ್ಪಾಗಿ ಅರ್ಥೈಸಿಕೊಳ್ಳಬಾರದು.

ಸ್ತ್ರೀಯರು ಕೆಲಸದ ಸ್ಥಳಗಳಲ್ಲಿ ಇರಬಾರದು ಎಂಬುದಾಗಿ ಸತ್ಯವೇದದಲ್ಲಿ ಎಲ್ಲಿಯು ನಿರ್ದಿಷ್ಟವಾಗಿ ಹೇಳಿಲ್ಲ. ಸತ್ಯವೇದದ ಅರ್ಥ ವಿವರಣೆಯಲ್ಲಿ ಸತ್ಯವೇದವು ಏನನ್ನಾದರೂ ವಿರೋಧಿಸದಿದ್ದರೆ, ಆಮೇಲೆ ಇತರೆ ಸಂಬಂಧಿತ ವಚನ ಭಾಗಗಳ ವ್ಯವಸ್ಥಿತ ಎಲ್ಲೆಗಳೊಡನೆ ಸರಿಯಾದ ತೀರ್ಮಾನವನ್ನು ನಾವು ಮಾಡಲೂ ದೇವರು ಅವಕಾಶ ಕೊಡುತ್ತಾನೆಂಬುದು ಇದರ ಅರ್ಥವಾಗಿದೆ.

All Peoples Church & World Outreach
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org